2017 ಕ.ತೀ.ವ 812

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

## ಕ್ರಿಶ್ಚಿಯನ್ ಚಿಡೀರೆ ಚುಕ್ವು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು*

ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ಜಾಮೀನನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಲಾಗಿದೆ.

ಪ್ರಾರಂಭಿಕವಾಗಿ, ಪ್ರಕರಣವನ್ನು ಭಾರತ ದಂಡ ಸಂಹಿತೆಯ 376 ಮತ್ತು 506ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳನ್ನು ದಾಖಲಿಸಲಾಗಿದೆ. ತನಿಖೆಯನ್ನು ಪೂರ್ಣಗೊಳಿಸಿದ ನಂತರ ಭಾರತ ದಂಡ ಸಂಹಿತೆಯ 376 ಮತ್ತು 506 ಮತ್ತು ವಿದೇಶೀಯರ ಅಧಿನಿಯಮ, 1946ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ.

ಮೊದಲ ಮಾಹಿತಿದಾರಳಾದ ಸಾಯಿಕುಮಾರಿ ಎಂಬ ಹೆಸರಿನ ಮಹಿಳೆಯನ್ನು ಈ ಅರ್ಜಿದಾರರು ಆಪರಾಧಿಕವಾಗಿ ಬೆದರಿಸಿ ಅವಳ ಮೇಲೆ ಅತ್ಯಾಚಾರ ಎಸಗಿದ್ದಾರೆಂಬ ಮಾಹಿತಿ ನೀಡಿರುವ ಮೇಲ್ನೋಟದ ವಾದದ ಆಧಾರದ ಮೇಲೆ ಜಾಮೀನು ನೀಡಿರುವುದನ್ನು, ರಾಜ್ಯವನ್ನು ಪ್ರತಿನಿಧಿಸಿರುವ ಮಾನ್ಯ ವಿಶೇಷ ಅಭಿಯೋಜಕರು ಭಾವಾವೇಶಪೂರಿತವಾಗಿ ವಿರೋಧಿಸಿದ್ದಾರೆ. ಅರ್ಜಿದಾರನು ನೈಜೀರಿಯಾದ ಒಕ್ಕೂಟ ಗಣರಾಜ್ಯಕ್ಕೆ ಸೇರಿದ ವಿದೇಶೀ ರಾಷ್ಟ್ರೀಯನಾಗಿದ್ದಾನೆಂದು ವಾದಿಸಲಾಗಿದೆ ಮತ್ತು 'ಮೆಡಿಕಲ್ ಅಟೆಂಡೆಂಟ್' ಪ್ರವರ್ಗದ ಅಡಿಯಲ್ಲಿ ಪಡೆದುಕೊಳ್ಳಲಾದ ಅವನ ವೀಸಾ ದಿನಾಂಕ 13.4.2013ರಂದು ಕೊನೆಗೊಂಡಿದ್ದರೂ ಕೂಡ ಬೆಂಗಳೂರಿನಲ್ಲಿ ಅವನು ವಾಸಿಸುತ್ತಿದ್ದನೆಂದು ವಾದಿಸಲಾಗಿದೆ. ಅವನು ವಿದೇಶೀಯರ ಅಧಿನಿಯಮ, ವಿದೇಶೀಯರ ಆದೇಶ 1948 ಮತ್ತು ವಿದೇಶೀಯರ ನೋಂದಣಿ ಅಧಿನಿಯಮ, 1939ರ ಉಪಬಂಧಗಳನ್ನು ಒಟ್ಟಾರೆಯಾಗಿ ಉಲ್ಲಂಘಿಸಿರುವುದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಈ ನ್ಯಾಯಾಲಯವನ್ನು ವಿನಂತಿಸಿದ್ದಾರೆ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿದ್ದಾನೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 7904/2015, ದಿನಾಂಕ: 18ನೇ ಫೆಬ್ರವರಿ, 2016.

ಸದೃಶವಾಗಿ, ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್‌ರವರಾದ ಶ್ರೀ ಪೊನ್ನಣ್ಣನವರು ರಾಜ್ಯದ ಪರವಾಗಿ ತನ್ನ ವಾದಗಳನ್ನು ಮಂಡಿಸಿದ್ದಾರೆ. ಬೆಂಗಳೂರಿನಲ್ಲಿ ನಿಗದಿತ ಅವಧಿ ಮೀರಿ ವಾಸವಾಗಿರುವ ವಿದೇಶೀಯರ ಸಂಖ್ಯೆಯ ಕಡೆಗೆ ಮತ್ತು ವೀಸಾ ಅವಧಿ ಮುಕ್ತಾಯಗೊಂಡ ನಂತರ ಅವರು ತಮಗೆ ಸಂಬಂಧಪಟ್ಟ ದೇಶಗಳಿಗೆ ಹೊರದೂಡುವವರೆಗೆ ವಿದೇಶೀಯರನ್ನು ಸ್ಥಾನಬದ್ಧತೆಯಲ್ಲಿಡಲು ಸಾಧ್ಯವಾಗುವ ರೀತಿಯಲ್ಲಿ ನಗರದಲ್ಲಿ ಸ್ಥಾನಬದ್ಧತೆ ಕೇಂದ್ರವನ್ನು ಸ್ಥಾಪಿಸದಿರುವುದು ಅವರ ಗಮನಕ್ಕೆ ಬಂದಿರುತ್ತದೆ.

ಸಾಮಾನ್ಯವಾಗಿ, ಜಾಮೀನು ಅರ್ಜಿಯನ್ನು ಪರಿಗಣಿಸುವಾಗ ಕ್ರಿಮಿನಲ್ ನ್ಯಾಯಾಲಯಗಳು, ಅಧಿವಿಚಾರಣಾ ನ್ಯಾಯಾಧಿಕರಣವನ್ನು ಸಂಪರ್ಕಿಸುತ್ತವೆ ಮತ್ತು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದನೇ ಎಂಬುದನ್ನು ನೋಡುತ್ತವೆ. ಆದರೆ ಭಾರತದಲ್ಲಿ ವಿದೇಶೀಯ ಅವಧಿ ಮೀರಿ ವಾಸಿಸಿರುವ ಸಂದರ್ಭಗಳಲ್ಲಿ, ಅವನನ್ನು ಗಡೀಪಾರು ಮಾಡುವವರೆಗೆ ಅದು ಕಾನೂನುಬಾಹಿರವಾಗಿ ಉಳಿದಂತಾಗುತ್ತದೆ ಮತ್ತು ಅವನು/ಅವಳನ್ನು ಬಿಡುಗಡೆ ಮಾಡಿದರೆ ಅಧಿವಿಚಾರಣೆಯು ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳುತ್ತದೆ, ಅಧಿವಿಚಾರಣೆ ತೀರ್ಮಾನವಾಗುವವರೆಗೆ ಭಾರತದಲ್ಲಿ ಉಳಿದುಕೊಳ್ಳಲು ಅವನಿಗೆ ಅವಕಾಶ ನೀಡಲಾಗುತ್ತದೆ ಮತ್ತು ಇದು ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆ.

ಸಿಂಧುವಾದ ವೀಸಾ ಇಲ್ಲದೆ ಮತ್ತು ವೀಸಾದ ವಿಸ್ತರಣೆಯನ್ನು ಮಾಡಿಕೊಳ್ಳಲು ಯಾವುದೇ ಕ್ರಮಕೈಗೊಳ್ಳದೆ 2 ವರ್ಷ 9 ತಿಂಗಳುಗಳಿಗಿಂತ ಹೆಚ್ಚು ಕಾಲ ಭಾರತದಲ್ಲಿ ಅವಧಿ ಮೀರಿ ವಾಸವಾಗಿರುವ ಪ್ರಸ್ತುತ ಅರ್ಜಿದಾರನ ಹಿನ್ನೆಲೆಯಲ್ಲಿ, ಬೆಳೆದಿರುವ ಹುಡುಗಿಯೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿರುವುದನ್ನು ಒಳಗೊಂಡಂತೆ ಅವಳನ್ನು ಮದುವೆಯಾಗಲು ಭರವಸೆ ನೀಡಿ ತದನಂತರ ತಾನು ಕೊಟ್ಟ ವಾಗ್ದಾನದಿಂದ ಹಿಂದೆ ಸರಿದಿರುವುದರ ಹಿನ್ನೆಲೆಯಲ್ಲಿ ಅವನಿಗೆ ಜಾಮೀನನ್ನು ನೀಡಲು ಹಕ್ಕುಳ್ಳವನಾಗಿಲ್ಲ. ಇದಲ್ಲದೆ, ಅರ್ಜಿದಾರನು, ತಾನು ನಿರ್ದಿಷ್ಟ ವಿಳಾಸದಲ್ಲಿ ವಾಸಿಸುತ್ತಿರುವುದನ್ನು ತೋರಿಸಲು ಯಾವುದೇ ಮಾಹಿತಿಯನ್ನು ಇಟ್ಟಿರುವುದಿಲ್ಲ ಮತ್ತು ಇದನ್ನು ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸು ಮತ್ತು ಎಫ್‌ಆರ್‌ಆರ್‌ಓ ರವರಿಗೆ ವರದಿ ಮಾಡಲಾಗಿದೆ. ಈಗಾಗಲೇ ತಿಳಿಸಲಾದಂತೆ, ವಿದೇಶೀಯರ ಅಧಿನಿಯಮ, 1946 ಕೇಂದ್ರದ ಕಾನೂನಾಗಿದ್ದು, ವಿದೇಶೀಯರ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಧಿಕಾರಗಳನ್ನು

ಪ್ರದಾನ ಮಾಡುತ್ತದೆ. ಈ ಅಧಿನಿಯಮದ ಮೇರೆಗೆ ಶಾಸನಬದ್ಧ ನಿಯಮಗಳನ್ನೂ ಸಹ ರೂಪಿಸಲಾಗಿದೆ. ವಿದೇಶೀಯರ ಆದೇಶ, 1948, ವಿದೇಶೀಯರ ಅಧಿನಿಯಮ, 1946ರ 3ನೇ ಪ್ರಕರಣದ ಮೇರೆಗೆ ಮಾಡಲಾದ ಅಧೀನ ಶಾಸನವಾಗಿದೆ. ವಿದೇಶೀಯರ ಆದೇಶ 1948ರ 7ನೇ ಆದೇಶದ ಯಾವುದೇ ಉಲ್ಲಂಘನೆಯು ದಂಡನೀಯವಾದ ಕ್ರಮವನ್ನು ಉಪಬಂಧಿಸುತ್ತವೆ. ವಾಸ್ತವವಾಗಿ, 11ನೇ ಆದೇಶವು, ನಿವಾಸದ ಸ್ಥಳ, ಯಾರೇ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗಗಳೊಂದಿಗೆ ಇರುವ ಸಂಘಟನೆ, ವಿದೇಶೀಯನು ಸಂಘದ ನಿಯಮಾವಳಿ ಹೊಂದಿರುವುದಕ್ಕೆ ಸಂಬಂಧಪಟ್ಟ ಷರತ್ತುಗಳನ್ನು ವಿಧಿಸುವ ಸಿವಿಲ್ ಪ್ರಾಧಿಕಾರವನ್ನು ಸಮರ್ಥಿಸುತ್ತದೆ. 10ನೇ ಆದೇಶವು, ಭಾರತದಲ್ಲಿರುವ ವಿದೇಶೀಯರ ಉದ್ಯೋಗಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ರೂಪಿಸಿದೆ. ವಿದೇಶೀ (ಸ್ಥಾನಬದ್ಧತೆ) ಆದೇಶ, 1952, ಸಂಶಯಾಸ್ಪದ ವಿದೇಶೀಯರನ್ನು ಬಂಧಿಸುವುದನ್ನು ಮತ್ತು ಸ್ಥಾನಬದ್ಧತೆಯಲ್ಲಿಡುವುದನ್ನು ಉಪಬಂಧಿಸುತ್ತದೆ.

ವಾಸ್ತವವಾಗಿ, ವಿದೇಶೀಯರ ಆದೇಶ, 2001ರ (ಪೊಲೀಸರಿಗೆ ವರದಿ) 2ನೇ ಆದೇಶವು ಸಿಂಧುವಾದ ದಸ್ತಾವೇಜುಗಳು ಇಲ್ಲದೆ, ಒಬ್ಬ ವಿದೇಶೀಯನು ಭಾರತದೊಳಕ್ಕೆ ಪ್ರವೇಶಿಸಿರುವನೆಂದು ಅಥವಾ ಉಳಿದುಕೊಳ್ಳಲು ಅಧಿಕೃತಗೊಳಿಸಿದ ಅವಧಿಯನ್ನು ಮೀರಿ ದೇಶದಲ್ಲಿ ವಾಸವಾಗಿರುವನೆಂದು ನಂಬಲು ಕಾರಣವಾಗಿರುವ ಯಾರೇ ವ್ಯಕ್ತಿಯು, ಯಾವುದೇ ಸ್ವರೂಪದ ಉದ್ದೇಶಕ್ಕಾಗಿ, ತಾನು ಸ್ವಾಧೀನಪಡಿಸಿಕೊಂಡು, ಮಾಲೀಕನಾದ ಅಥವಾ ನಿಯಂತ್ರಿಸಲಾದ ಆವರಣಗಳಲ್ಲಿ ಅಂಥ ವ್ಯಕ್ತಿಗೆ ಸ್ಥಳಾವಕಾಶ ಒದಗಿಸಿದ್ದಲ್ಲಿ, ಅಂಥ ವಿದೇಶೀಯನು ಇರುವ ಕುರಿತು 24 ಗಂಟೆಗಳೊಳಗೆ ಹತ್ತಿರದ ಪೊಲೀಸು ಠಾಣೆಗೆ ತಿಳಿಸುವುದು ಅಂಥ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು ಎಂಬುದನ್ನು ಕಡ್ಡಾಯಗೊಳಿಸುತ್ತದೆ.

ವಿದೇಶೀಯರ ನೋಂದಣಿ ಅಧಿನಿಯಮದ 5ನೇ ಪ್ರಕರಣವು, ಸದರಿ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿನ ದಂಡಗಳ ಕುರಿತು ಉಪಬಂಧಿಸುತ್ತದೆ. ವಿದೇಶೀಯರ ನೋಂದಣಿ ನಿಯಮಗಳು, 1992, ಭಾರತ ತಲುಪಿದ ಸಮಯದಲ್ಲಿ ವರದಿ ಮಾಡಿಕೊಳ್ಳುವ ಸಂಬಂಧದಲ್ಲಿ ಅವರ ವಿಳಾಸ, ನೋಂದಣಿಯ ಪ್ರಕ್ರಿಯೆ, ನೋಂದಣಿಯ ಪ್ರಮಾಣಪತ್ರದ ಸಿಂಧುತ್ವದ ಅವಧಿ, ಗುರುತಿನ ರುಜುವಾತನ್ನು ಹಾಜರುಪಡಿಸುವಿಕೆ, ವಿಳಾಸ ಬದಲಾಯಿಸಿರುವುದರ ವರದಿ, ನೋಂದಣಿಯಾದ ವಿಳಾಸದ ಬದಲಾವಣೆ, ನಿರ್ಗಮಿಸುವ ಕುರಿತು ಪ್ರಮಾಣಪತ್ರಗಳ

ಸಲ್ಲಿಕೆ, ಮುಂತಾದವುಗಳ ಸಂಬಂಧದಲ್ಲಿ ಭಾರತದಲ್ಲಿ ನೆಲೆಸಿರುವ ವಿದೇಶೀಯರ ಮೇಲಿರುವ ಕೆಲವು ಹೊಣೆಗಾರಿಕೆಗಳನ್ನು ಗೊತ್ತುಪಡಿಸುತ್ತದೆ. ಹಲವಾರು ಆದೇಶಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ನ್ಯಾಯಾಲಯವು ವಿದೇಶೀಯರು ದೀರ್ಘಕಾಲ ಅವಧಿ ಮೀರಿ ವಾಸಿಸಿರುವ ಹಲವಾರು ಪ್ರಕರಣಗಳನ್ನು ತನಿಖೆ ಮಾಡದೆ ಹಾಗೆ ಉಳಿದಿವೆಯೆಂದು ಮತ್ತು ಪೊಲೀಸರನ್ನು ಒಳಗೊಂಡಂತೆ ಸಂಬಂಧಪಟ್ಟ ಪ್ರಾಧಿಕಾರಗಳು, ಅಂಥ ಗಂಭೀರ ಮತ್ತು ಯುಕ್ತ ಕ್ರಮ ಕೈಗೊಳ್ಳಲು ಲೋಪಗಳನ್ನು ಗುರುತಿಸಲು ಸಂಪೂರ್ಣ ತನಿಖೆಯನ್ನು ನಡೆಸಬೇಕಾಗುತ್ತದೆಯೆಂಬುದನ್ನು ಪುನರುಚ್ಚರಿಸುವ ಅಗತ್ಯವಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ವಿದೇಶೀಯರು ಯಾವ ದೇಶದಿಂದ ಭಾರತಕ್ಕೆ ಬಂದಿರುವರೋ ಆ ದೇಶವು ಪಾಸ್‌ಪೋರ್ಟನ್ನು ನೀಡಿದ್ದರೂ ಸಹ, ನಮ್ಮ ದೇಶವು ವೀಸಾ ಸ್ಟ್ಯಾಂಪಿಂಗ್ ಅನ್ನು ಮಾಡುತ್ತದೆ ಮತ್ತು ನಿರ್ದಿಷ್ಟ ಅವಧಿವರೆಗೆ ಮಾತ್ರ ಭಾರತದಲ್ಲಿ ವಾಸಿಸಲು ವಿದೇಶೀಯರನ್ನು ಅಧಿಕೃತಗೊಳಿಸಿರುವ ವಿದ್ಯುಕ್ತ ದಸ್ತಾವೇಜಾಗಿರುತ್ತದೆ ಮತ್ತು ಯಾವ ಉದ್ದೇಶಕ್ಕೆ ವೀಸಾವನ್ನು ನೀಡಲಾಗಿದೆಯೋ ಆ ಉದ್ದೇಶವನ್ನು ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳಬಾರದು. ವೀಸಾ ಅವಧಿಯು ಮುಕ್ತಾಯವಾಗುವ ಮೊದಲು ಅವರು ವಾಸಿಸುವುದನ್ನು ವಿಸ್ತರಿಸಲು ಯಾವುದೇ ತಕ್ಷಣದ ಕ್ರಮಗಳನ್ನು ಕೈಗೊಳ್ಳದ ವ್ಯಕ್ತಿಗಳಿಗೆ ವೀಸಾ ಅವಧಿಯನ್ನು ಮೀರಿ ವಾಸಿಸಲು ವಿದೇಶೀಯರಿಗೆ ಅವಕಾಶ ನೀಡಿದರೆ, ಸಂಬಂಧಪಟ್ಟವರ ವಿರುದ್ಧ ಗಟ್ಟಿ ದನಿಯಲ್ಲಿ ಮಾತನಾಡಬೇಕಾಗುತ್ತದೆ.

ವಿದೇಶೀಯರ ಅಧಿನಿಯಮ, 1946ರ ಸಂಬಂಧಪಟ್ಟ ಉಪಬಂಧಗಳು ಅಥವಾ ಯಾವುದೇ ಇತರ ಅಧಿನಿಯಮ ಅಥವಾ ಸ್ಥಳೀಯ ಕಾನೂನುಗಳ ದಂಡನೀಯ ಉಪಬಂಧಗಳನ್ನು ಉಲ್ಲಂಘಿಸಿರುವುದಕ್ಕೆ ಯಾರೇ ವಿದೇಶೀ ರಾಷ್ಟ್ರೀಯನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಸಂಬಂಧಪಟ್ಟ ಕ್ರಿಮಿನಲ್ ನ್ಯಾಯಾಲಯವು, ವಿದೇಶೀಯನನ್ನು ಜಾಮೀನಲ್ಲಿ ಇಡಬೇಕೆ ಅಥವಾ ನ್ಯಾಯಿಕ ಅಭಿರಕ್ಷೆಯಲ್ಲಿಡಬೇಕೆ ಎಂಬುದರ ಹೆಚ್ಚಿನ ಆದ್ಯತೆಯ ಮೇಲೆ ಅಂಥ ಪ್ರಕರಣಗಳನ್ನು ಅಧಿವಿಚಾರಣೆಗೆ ಕೈಗೆತ್ತಿಕೊಳ್ಳಬೇಕು. ಅಧಿವಿಚಾರಣೆಯನ್ನು ನಡೆಸುವಲ್ಲಿ ಏನಾದರೂ ವಿಳಂಬವಾದರೆ, ವೀಸಾ ಅವಧಿ ಮುಕ್ತಾಯವಾದ ನಂತರವೂ ಸಹ ಭಾರತದಲ್ಲಿರುವ ಅಂಥ ವಿದೇಶೀ ರಾಷ್ಟ್ರೀಯನಿಗೆ ಅವಕಾಶ ನೀಡುವುದು ಆದಷ್ಟೂ ಉತ್ತಮವಾಗಿರುತ್ತದೆ.

ಈ ನ್ಯಾಯಾಲಯದ ರಿಜಿಸ್ಟ್ರಿಯು, ಮಾನ್ಯ ಮುಖ್ಯ ನ್ಯಾಯಮೂರ್ತಿಯವರೊಂದಿಗೆ ಸಮಾಲೋಚಿಸಿ, ಪ್ರಮುಖ ಆದ್ಯತೆಯ ಮೇಲೆ ಯಾವ ಕ್ರಿಮಿನಲ್ ಪ್ರಕರಣಗಳಲ್ಲಿ ವಿದೇಶೀಯರು ತೊಡಗಿರುವರೋ ಅವುಗಳನ್ನು ವಿಲೇವಾರಿ ಮಾಡಲು ರಾಜ್ಯದಲ್ಲಿರುವ ಕ್ರಿಮಿನಲ್ ನ್ಯಾಯಾಲಯಗಳ ಪ್ರಿಸೈಡಿಂಗ್ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಸುತ್ತೋಲೆಯನ್ನು ಹೊರಡಿಸಲು ಸಹ ಆಲೋಚಿಸಬಹುದು.

ವಿದೇಶೀಯರು ಯಾವ ಪ್ರಕರಣಗಳ ಅಧಿವಿಚಾರಣೆಯಲ್ಲಿ ಭಾಗಿಯಾಗಿರುವರೋ ಆ ಪ್ರಕರಣಗಳನ್ನು ಕ್ರಿಮಿನಲ್ ನ್ಯಾಯಾಲಯಗಳು ಆದ್ಯತೆಯ ಮೇಲೆ ಅಂಥ ವಿಷಯಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಆಜ್ಞಾಪನೆ ಪ್ರಕಾರ ಯಾವುದೇ ಅನುಚಿತ ವಿಳಂಬ ಮಾಡದೆ ಅದನ್ನು ವಿಲೇ ಮಾಡಬೇಕು ಎಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ಇದಲ್ಲದೆ, ವಿದೇಶೀಯನು ತಪ್ಪಿತಸ್ಥನೆಂದು ಒಪ್ಪಿಕೊಳ್ಳುವುದರ ಆಧಾರದ ಮೇಲಾಗಲಿ ಅಥವಾ ಪ್ರತಿವಾದದ ನಂತರ ಅವನನ್ನು ನ್ಯಾಯಾಲಯವು ತಪ್ಪಿತಸ್ಥನೆಂದು ನಿರ್ಣಯಿಸುವ ಆಧಾರದ ಮೇಲಾಗಲಿ ವಿದೇಶೀಯನ ಅಪರಾಧವನ್ನು ನಿರ್ಣಯಿಸುತ್ತಿರುವಾಗ, ನ್ಯಾಯಾಲಯವು, ಸೌಮ್ಯಕಾರಕ ಮತ್ತು ತೀವ್ರತರ ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿದೇಶೀಯರೊಂದಿಗೆ ವ್ಯವಹರಿಸುವ ಕ್ರಿಮಿನಲ್ ನ್ಯಾಯಾಲಯಗಳ ನ್ಯಾಯಾಧೀಶರು ಇಂಗ್ಲೀಷಿನಲ್ಲಿ ತೀರ್ಪುಗಳನ್ನು ಬರೆಯುವ ಮೂಲಕ ಮತ್ತು ಇಂಗ್ಲೀಷ್‌ನಲ್ಲಿ ಸಾಕ್ಷ್ಯವನ್ನು ದಾಖಲಿಸುವ ಮೂಲಕ ಸಕಾರಾತ್ಮಕ ಪ್ರಯುತ್ನ ಮಾಡಲೇಬೇಕು. ಈ ನ್ಯಾಯಾಲಯವು, ಯಾವುದೇ ಅಲ್ಪಶಿಕ್ಷೆಯಾಗಿರುವುದಿಲ್ಲವೆಂದು ಮತ್ತು ವಿಶೇಷ ಸಂದರ್ಭಗಳಲ್ಲಿ ಕಡಿಮೆ ದಂಡನೆ ವಿಧಿಸಲು ವಿವೇಚನೆಯನ್ನು ಬಳಸಿಕೊಳ್ಳಬಹುದೆಂದು ಮತ್ತು ಅಂಥ ಕ್ರಮವನ್ನು ಅಳವಡಿಸಿಕೊಳ್ಳಲು ವಿಶೇಷ ಆಧಾರಗಳಿರಲೇಬೇಕೆಂದು ಅಪೇಕ್ಷಿಸುತ್ತದೆ.

ತನಿಖಾ ಏಜೆನ್ಸಿಯು ಪಾಸ್‌ಪೋರ್ಟ್‌ಗಳನ್ನು ವಶಪಡಿಸಿಕೊಂಡಾಗ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸುವಾಗಲೆಲ್ಲ ಅಥವಾ ಯಾವುದೇ ಕ್ರಿಮಿನಲ್ ನ್ಯಾಯಾಲಯದ ಮುಂದೆ ಪಾಸ್‌ಪೋರ್ಟ್‌ಗಳನ್ನು ಹಾಜರುಪಡಿಸಲು ಆದೇಶಿಸಿದಾಗ, ಜಾಮೀನು ಪತ್ರಗಳನ್ನು ನಿರ್ವಹಿಸುತ್ತಿರುವಾಗ, ಪ್ರಕರಣದ ದಾಖಲೆಗಳೊಂದಿಗೆ ಯಾವುದೇ ರೀತಿಯಲ್ಲಿ ಅವುಗಳನ್ನು ಸೇರಿಸಬಾರದು, ಆದರೆ, ಸುರಕ್ಷಿತ ಅಭಿರಕ್ಷೆಯಲ್ಲಿಡಬೇಕು ಮತ್ತು ಸಾಧ್ಯವಾದರೆ, ಆರೋಪ ಪಟ್ಟಿಯೊಂದಿಗೆ ತನಿಖಾಧಿಕಾರಿ

ಮುಂದೆ ಅಂಥ ಪಾಸ್‌ಪೋರ್ಟನ್ನು ಹಾಜರುಪಡಿಸಿರುವ ಅಥವಾ ಜಾಮೀನು ಷರತ್ತುಗಳಿಗೆ ಅನುಸಾರವಾಗಿ ಅದನ್ನು ಹಾಜರುಪಡಿಸಿರುವ ಪಾಸ್‌ಪೋರ್ಟ್ ಧಾರಕನಿಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ವೀಸಾ ವರದಿಗಳನ್ನು ಒಳಗೊಂಡಿರುವ ಮೂಲ ಪಾಸ್‌ಪೋರ್ಟನ್ನು ಅವನು ಯಾಕೆ ಹೊಂದಿರಲಿಲ್ಲವೆಂಬ ಬಗ್ಗೆ ಯಾರೇ ವ್ಯಕ್ತಿಗೆ ತೋರಿಸಲು ವಿದೇಶೀಯನನ್ನು ಇದು ಶಕ್ತಗೊಳಿಸುತ್ತದೆ.

ಪ್ರಕರಣವನ್ನು ಆದಷ್ಟು ಬೇಗನೆ ವಿಲೇವಾರಿ ಮಾಡುವಲ್ಲಿ ನ್ಯಾಯಾಲಯಕ್ಕೆ ಸಹಾಯ ಮಾಡುವುದು ಸಹ ಸಂಬಂಧಪಟ್ಟ ಅಭಿಯೋಜಕರ ಬದ್ಧ ಕರ್ತವ್ಯವಾಗಿರುತ್ತದೆ. ಪೊಲೀಸು ಇಲಾಖೆಯು ನೈಜ ಕುಂದುಕೊರತೆಯನ್ನು ಆಲಿಸಲು ಪೊಲೀಸು ಉಪ ಆಯುಕ್ತ ಅಥವಾ ಪೊಲೀಸು ಅಧೀಕ್ಷಕರ ದರ್ಜೆಗೆ ಕಡಿಮೆಯಿರದ ಪೊಲೀಸು ಅಧಿಕಾರಿಯು ಮುಖ್ಯಸ್ಥರಾದ ವಿಭಾಗವನ್ನು ಸ್ಥಾಪಿಸಲು ಮತ್ತು ವಿದೇಶೀ ರಾಷ್ಟ್ರೀಯರ ಮತ್ತು ಅವರಲ್ಲಿರುವ ನೈಜ ಕುಂದು ಕೊರತೆಗಳನ್ನು ಪರಿಗಣಿಸಲು ಮತ್ತು ತನಿಖೆಯನ್ನು ಪೂರ್ಣಗೊಳಿಸಿದ ನಂತರ ತನಿಖಾಧಿಕಾರಿಯು ಸಲ್ಲಿಸಬಹುದಾದ ಅಂತಿಮ ವರದಿಯನ್ನು ಪರೀಕ್ಷಿಸಲು ಪೊಲೀಸು ಇಲಾಖೆ ಆಲೋಚಿಸಬಹುದೆಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ತನಿಖೆಯು ಆಮೂಲಾಗ್ರವಾಗಿ ಮತ್ತು ಪರಿಣಾಮಕಾರಿಯಾಗಿರಬೇಕೆಂಬುದನ್ನು ಸಹಾ ಪುನರುಚ್ಚರಿಸಬೇಕಾಗಿರುವುದಿಲ್ಲ ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಕ್ರಿಮಿನಲ್ ಅರ್ಜಿಯನ್ನು ವಜಾಗೊಳಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *[2005] 5 ಸಿಟಿಸಿ 762 (ಮದ್ರಾಸ್)*
   *ಜನರಾಜನ್ @ ಕೃಷ್ಣಮುರಳಿ –ವಿರುದ್ಧ–*
   *ತಮಿಳುನಾಡು ರಾಜ್ಯ* *(ಉಲ್ಲೇ) 23*
2. *[2013]12 ಎಸ್‌ಸಿಸಿ 315*
   *ಬಿಶ್ರತ್ ಅಲಿ –ವಿರುದ್ಧ– ಭಾರತ ಒಕ್ಕೂಟ* *(ಉಲ್ಲೇ) 23*
3. *ಐಎಲ್‌ಆರ್ 2004 ಕೆಎಆರ್ 4603*
   *ಇಎಲ್ ಮುಸ್ತಾಫಾ ಇಎಲ್ ಫಾಥಿ –ವಿರುದ್ಧ–*
   *ಕರ್ನಾಟಕ ರಾಜ್ಯ* *(ಉಲ್ಲೇ) 27*

ಅರ್ಜಿದಾರರ ಪರ: ಶ್ರೀ ಜಿ. ನಾಗರಾಜ ಗೌಡ, ವಕೀಲರು.
1ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಎಸ್. ಪೊನ್ನಣ್ಣ, ಅಡಿಷನಲ್ ಅಡ್ವೊಕೇಟ್ ಜನರಲ್,
ಎದುರುದಾರ ಸಂ.2ರ ಪರ: ಶ್ರೀ ಕೃಷ್ಣ ಎಸ್. ದೀಕ್ಷಿತ್, ಅಸಿಸ್ಟೆಂಟ್ ಸಾಲಿಸಿಟರ್ ಜನರಲ್.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ದಿನಾಂಕ 1.10.2015ರಂದು ಬೆಂಗಳೂರಿನ ಕೆ.ಆರ್. ಪುರಂ ಪೊಲೀಸು ಠಾಣೆಯು ದಾಖಲಿಸಿದ ಅಪರಾಧ ಸಂ.602/15ರಲ್ಲಿ ಕ್ರಿಮಿನಲ್ ಪ್ರಕರಣದ ಒಬ್ಬನೇ ಆಪಾದಿತ ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ಪ್ರಸ್ತುತ ಜಾಮೀನು ಅರ್ಜಿಯನ್ನು ಸಲ್ಲಿಸಿದ್ದಾನೆ.

2. ಪ್ರಾರಂಭಿಕವಾಗಿ, ಪ್ರಕರಣವನ್ನು ಭಾರತ ದಂಡ ಸಂಹಿತೆಯ 376 ಮತ್ತು 506ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳ ಅಡಿಯಲ್ಲಿ ದಾಖಲಿಸಲಾಗಿದೆ. ತನಿಖೆಯನ್ನು ಪೂರ್ಣಗೊಳಿಸಿದ ನಂತರ ಭಾರತ ದಂಡ ಸಂಹಿತೆಯ 376 ಮತ್ತು 506 ಮತ್ತು ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಆರೋಪಪಟ್ಟಿಯನ್ನು ಸಲ್ಲಿಸಲಾಗಿದೆ.

3. ಮೊದಲ ಮಾಹಿತಿದಾರಳಾದ ಸಾಯಿಕುಮಾರಿ ಎಂಬ ಹೆಸರಿನ ಮಹಿಳೆಯನ್ನು ಈ ಅರ್ಜಿದಾರರು ಅಪರಾಧಿಕವಾಗಿ ಬೆದರಿಸಿ ಅವಳ ಮೇಲೆ ಅತ್ಯಾಚಾರ ಎಸಗಿದ್ದಾರೆಂಬ ಮಾಹಿತಿ ನೀಡಿರುವ ಮೇಲ್ನೋಟದ ವಾದದ ಆಧಾರದ ಮೇಲೆ ಜಾಮೀನು ನೀಡುವುದನ್ನು, ರಾಜ್ಯವನ್ನು ಪ್ರತಿನಿಧಿಸಿರುವ ಮಾನ್ಯ ವಿಶೇಷ ಅಭಿಯೋಜಕರು ಭಾವಾವೇಶಪೂರಿತವಾಗಿ ವಿರೋಧಿಸಿದ್ದಾರೆ. ಅರ್ಜಿದಾರನು

ನೈಜೀರಿಯಾದ ಒಕ್ಕೂಟ ಗಣರಾಜ್ಯಕ್ಕೆ ಸೇರಿದ ವಿದೇಶೀ ರಾಷ್ಟ್ರೀಯನಾಗಿದ್ದಾನೆಂದು ವಾದಿಸಲಾಗಿದೆ ಮತ್ತು 'ಮೆಡಿಕಲ್ ಅಟೆಂಡೆಂಟ್' ಪ್ರವರ್ಗದ ಅಡಿಯಲ್ಲಿ ಪಡೆದುಕೊಳ್ಳಲಾದ ಅವನ ವೀಸಾ ದಿನಾಂಕ 13.4.2013ರಂದು ಕೊನೆಗೊಂಡಿದ್ದರೂ ಕೂಡ ಬೆಂಗಳೂರಿನಲ್ಲಿ ಅವನು ವಾಸಿಸುತ್ತಿದ್ದನೆಂದು ವಾದಿಸಲಾಗಿದೆ. ಅವನು ವಿದೇಶೀಯರ ಅಧಿನಿಯಮ, ವಿದೇಶೀಯರ ಆದೇಶ 1948 ಮತ್ತು ವಿದೇಶೀಯರ ನೋಂದಣಿ ಅಧಿನಿಯಮ, 1939ರ ಉಪಬಂಧಗಳನ್ನು ಒಟ್ಟಾರೆಯಾಗಿ ಉಲ್ಲಂಘಿಸಿರುವುದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಈ ನ್ಯಾಯಾಲಯವನ್ನು ವಿನಂತಿಸಿದ್ದಾರೆ. ಆದ್ದರಿಂದ ಜಾಮೀನು ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿದ್ದಾನೆ.

4. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ನಾಗರಾಜೇಗೌಡರ ವಾದವನ್ನು ಆಲಿಸಲಾಗಿದೆ. ಅವರು ಅರ್ಜಿದಾರನ ವಿರುದ್ಧ ಮಾಡಲಾದ ಅತ್ಯಾಚಾರ ಅಪರಾಧಕ್ಕೆ ಸಂಬಂಧಪಟ್ಟಂತೆ ಮೇಲ್ನೋಟಕ್ಕೆ ಮಾಹಿತಿ ಸಿಗುವುದಿಲ್ಲವೆಂದು ಮತ್ತು ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕೆ ಉದ್ದೇಶಿಸಲಾದ ಗರಿಷ್ಠ ಶಿಕ್ಷೆಯನ್ನು 5 ವರ್ಷಗಳವರೆಗಿನ ಕಾರಾವಾಸ ಮತ್ತು ಜುಲ್ಮಾನೆಯನ್ನು ವಿಧಿಸಬಹುದೆಂದು, ಜೆಎಂಎಫ್‌ನ ನ್ಯಾಯಾಲಯ–V ಪ್ರತ್ಯೇಕವಾಗಿ ಅಧಿವಿಚಾರಣೆ ನಡೆಸಬಹುದಾಗಿದೆಯೆಂದು ನಿವೇದಿಸಿದ್ದಾರೆ. ಆದುದರಿಂದ, ಈ ನ್ಯಾಯಾಲಯವು ಉದಾರ ದೃಷ್ಟಿಯನ್ನು ತಳೆಯಬೇಕೆಂದು ಕೋರಿಕೊಂಡಿದ್ದಾರೆ. ತನ್ನ ಕಕ್ಷಿದಾರರು, ಅವರಿಗೆ ವಿಧಿಸಬಹುದಾದ ಯಾವುದೇ ಷರತ್ತನ್ನು ಪಾಲಿಸಲು ಬದ್ಧರಾಗಿರುವರೆಂದು ನಿವೇದಿಸಿದ್ದಾರೆ. ಭಾರತ ದಂಡ ಸಂಹಿತೆಯ 376ನೇ ಪ್ರಕರಣವನ್ನು ಸಂಪೂರ್ಣವಾಗಿ ಈ ಪ್ರಕರಣದ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲವೆಂಬುದು ಮತ್ತು ಮದುವೆಯಾಗುವ ವಾಗ್ದಾನವನ್ನು ಉಲ್ಲಂಘಿಸಿರುವನೆಂಬ ಕಾರಣದ ಮೇಲೆ ಭಾರತ ದಂಡ ಸಂಹಿತೆಯ 417ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧವಾಗಿದೆಯೆಂದು ವಾದಿಸಲಾಗಿದೆ.

5. ಭಾರತದಲ್ಲಿ ನೆಲೆಸಿರುವ ವಿದೇಶೀ ರಾಷ್ಟ್ರೀಯರಿಗೆ ಸಂಬಂಧಪಟ್ಟ ವಿದೇಶಿ ಅಧಿನಿಯಮಕ್ಕೆ ಒಳಪಟ್ಟಿರುವುದರಿಂದ, ಅರ್ಜಿದರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಿಗೆ 2ನೇ ಸಂಖ್ಯೆಯ ಎದುರುದಾರನೆಂದು ಭಾರತ ಒಕ್ಕೂಟವನ್ನು ದಾವೆಗೆ ಸೇರಿಸಲು ನಿರ್ದೇಶಿಸಲಾಗಿತ್ತು. ತದನುಸಾರವಾಗಿ, ಭಾರತ ಒಕ್ಕೂಟವನ್ನು ದಾವೆಗೆ ಸೇರಿಸಲಾಯಿತು. ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಶ್ರೀ ಕೃಷ್ಣ ಎಸ್. ದೀಕ್ಷಿತ್ ರವರು ಅರ್ಜಿಯನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆ ಮತ್ತು ವಾದವನ್ನು ದೀರ್ಘವಾಗಿ ಮಂಡಿಸಿದ್ದಾರೆ. ವಿದೇಶೀಯರ ಅಧಿನಿಯಮ, 1946, ಪಾಸ್‌ಪೋರ್ಟ್‌ಗಳ ಅಧಿನಿಯಮದ ಉಪಬಂಧಗಳು ಮತ್ತು ಇತರ ಸಂಬಂಧಿತ ಕಾನೂನುಗಳು ಮತ್ತು ಶಾಸನಬದ್ಧ ಆದೇಶಗಳನ್ನು ಗಂಭೀರವಾಗಿ ಉಲ್ಲಂಘಿಸಿರುವುದರ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕರಣದ ಬೇರೆ ಬೇರೆ ಆಯಾಮಗಳನ್ನು ಪ್ರಸ್ತಾವಿಸಿದ್ದಾರೆ. ಇವರು ವಿದೇಶೀ ಪ್ರಾದೇಶಿಕ ನೋಂದಣಿ ಅಧಿಕಾರಿಯವರ ನೆರವು ಪಡೆದಿದ್ದಾರೆ.

6. ಸದೃಶವಾಗಿ, ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್‌ರವರಾದ ಶ್ರೀ ಪೊನ್ನಣ್ಣನವರು ರಾಜ್ಯದ ಪರವಾಗಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಬೆಂಗಳೂರಿನಲ್ಲಿ ನಿಗದಿತ ಅವಧಿ ಮೀರಿ ವಾಸವಾಗಿರುವ ವಿದೇಶೀಯರ ಸಂಖ್ಯೆಯ ಕಡೆಗೆ ಮತ್ತು ವೀಸಾ ಅವಧಿ ಮುಕ್ತಾಯಗೊಂಡ ನಂತರ ಅವರು ತಮಗೆ ಸಂಬಂಧಪಟ್ಟ ದೇಶಗಳಿಗೆ ಹೊರದೂಡುವವರೆಗೆ ವಿದೇಶೀಯರನ್ನು ಸ್ಥಾನಬದ್ಧತೆಯಲ್ಲಿಡಲು ಸಾಧ್ಯವಾಗುವ ರೀತಿಯಲ್ಲಿ ನಗರದಲ್ಲಿ ಸ್ಥಾನಬದ್ಧತೆ ಕೇಂದ್ರವನ್ನು ಸ್ಥಾಪಿಸದಿರುವುದು ಅವರ ಗಮನಕ್ಕೆ ಬಂದಿರುತ್ತದೆ.

7. ವಿದೇಶಿ ಅಧಿನಿಯಮ ಮತ್ತು ಸಂಬಂಧಪಟ್ಟ ಅಧಿನಿಯಮಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ನೋಂದಾಯಿತವಾದ ಮತ್ತು ತನಿಖೆ ಮಾಡಲಾದ ಪ್ರಕರಣಗಳ ಸಂಖ್ಯೆಯನ್ನು ಮತ್ತು ಬೆಂಗಳೂರಿನಲ್ಲಿ ನ್ಯಾಯಾಲಯಗಳ ಮುಂದಿರುವ ಇತ್ಯರ್ಥದಲ್ಲಿರುವ ಪ್ರಕರಣಗಳು ಮತ್ತು ಇದರ ಸಂಬಂಧದಲ್ಲಿ ಆದ ವಿಳಂಬದ ಬಗ್ಗೆ ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್ ಮತ್ತು ಮಾನ್ಯ ಎಸ್‌ಪಿಪಿಯವರ ಗಮನಕ್ಕೆ ಈ ನ್ಯಾಯಾಲಯ ತಂದಿದೆ.

8. ಮಾನ್ಯ ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಶ್ರೀ ಕೃಷ್ಣ ಎಸ್. ದೀಕ್ಷಿತ್‌ರವರು, ಬೆಂಗಳೂರಿನಲ್ಲಿ ಅವಧಿ ಮಿರಿ ವಾಸವಾಗಿರುವ ರಾಷ್ಟ್ರವಾರು ವಿದೇಶೀಯರ ಪಟ್ಟಿಯನ್ನು ಸಲ್ಲಿಸಿದ್ದಾರೆ. ವಾಸ್ತವವಾಗಿ, ಪೊಲೀಸು ಭಾರತ ಸರ್ಕಾರವು, ಬೆಂಗಳೂರಿನಲ್ಲಿ ಮತ್ತು ರಾಜ್ಯದ ಇತರ ಭಾಗಗಳಲ್ಲಿ ಅವರು ದೀರ್ಘವಾಗಿ ಮತ್ತು ಸಮರ್ಥಿಸಲಾಗದ ಅವಧಿ ಮೀರಿದ ಕಾಲ ವಾಸವಾಗಿದ್ದರೂ ಇಲ್ಲಿ ವಾಸವಿರುವ ವಿದೇಶೀ ರಾಷ್ಟ್ರೀಯರ ಸಂಬಂಧದಲ್ಲಿ ಮತ್ತು ಪಾಸ್‌ಪೋರ್ಟ್‌ಗಳ ಅಧಿನಿಯಮ ಅಥವಾ ವಿದೇಶೀಯರ ಅಧಿನಿಯಮದ ಉಪಬಂಧಗಳು ಅಥವಾ ರಾಜ್ಯದ ಅಥವಾ ರಾಷ್ಟ್ರದ ಇತರ ದಂಡನೀಯ ಪರಿನಿಯಮಗಳನ್ನು ಉಲ್ಲಂಘಿಸುವ ಮೂಲಕವಾಗಲಿ ಯಾವುದೇ ರೀತಿಯಲ್ಲಿ ಅವರು (ವಿದೇಶೀಯರು) ಇದನ್ನು ದುರುಪಯೋಗಪಡಿಸಿಕೊಳ್ಳಬಾರದೆಂಬುದರ ಸಂಬಂಧದಲ್ಲಿ ಮೃದು ಧೋರಣೆ ತಾಳಿದೆಯೆಂದು ಅವರು ನಿವೇದಿಸಿದ್ದಾರೆ.

9. ಶ್ರೀ ಪೊನ್ನಣ್ಣನವರು ಕೆಲವು ಪ್ರಕರಣಗಳನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಈ ಪ್ರಕರಣಗಳಲ್ಲಿ ಅಧಿವಿಚಾರಣಾ ನ್ಯಾಯಾಲಯಗಳು, ವಿದೇಶೀಯರ ಅಧಿನಿಯಮ, 1946 ಮತ್ತು ವಿದೇಶೀಯರ ಆದೇಶ 1948ರ ಉಪಬಂಧಗಳನ್ನು ಉಲ್ಲಂಘಿಸಿದ ಆರೋಪಿಗಳಾಗಿರುವ ಆಪಾದಿತ ವ್ಯಕ್ತಿಗಳಿಗೆ ಅತೀ ಕಡಿಮೆ ಶಿಕ್ಷೆಯನ್ನು ವಿಧಿಸಲಾಗಿದೆ. ದೀರ್ಘಕಾಲದವರೆಗೆ ಅವಧಿ ಮೀರಿ ವಾಸವಾಗಿರುವ ವಿದೇಶೀಯರ ಪ್ರಕರಣಗಳಲ್ಲೂ ಸಹ ಒಂದು ದಿನದ ಸಾದಾ ಕಾರಾವಾಸ ಮತ್ತು 10,000/– ರೂ.ಗಳ ಜುಲ್ಮಾನೆಯನ್ನು ವಿಧಿಸಲಾಗಿದೆಯೆಂಬುದನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ ಮತ್ತು ನ್ಯಾಯಾಲಯಗಳು ತುಂಬಾ ಮೆದು ದೃಷ್ಟಿಕೋನವನ್ನು ತಳೆದಿವೆ. ಆದ್ದರಿಂದ ವಿದೇಶೀಯರ ವಿರುದ್ಧ ವಿಧಿಸಲಾದ ಅಪರಾಧದ ಆಪಾದನೆಗಳನ್ನು ಮಾಡಿದಾಗಲೆಲ್ಲಾ ಅಥವಾ ಪ್ರತಿವಾದದ ನಂತರ ಅವರನ್ನು ಅಪರಾಧಿಗಳೆಂದು ನಿರ್ಣಯಿಸಿದಾಗಲೆಲ್ಲ ಅಧಿವಿಚಾರಣಾ ನ್ಯಾಯಾಲಯವು ಅಳವಡಿಸಿಕೊಳ್ಳಬೇಕಾದ ಸೂಚನೆಗಳ ಸಂಬಂಧದಲ್ಲಿ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಲು ಈ ನ್ಯಾಯಾಲಯವನ್ನು ಕೋರಿಕೊಂಡಿದ್ದಾರೆ.

10. ಬೆಂಗಳೂರಿನ ಅಪರ ಪೊಲೀಸು ಆಯುಕ್ತರಾದ ಶ್ರೀ ಚರಣ್ ರೆಡ್ಡಿಯವರು ಸಹ ಹಾಜರಿದ್ದಾರೆ. ಸುಮಾರು 2013ರಿಂದ 2016ರ ವರೆಗೆ ವಿಭಾಗೀಯವಾರು

ವಿದೇಶೀಯರ ವಿರುದ್ಧ ಬೆಂಗಳೂರಿನಲ್ಲಿ ನೋಂದಾಯಿಸಲಾದ ಪ್ರಕರಣಗಳ ಸಂಖ್ಯೆಗೆ ಸಂಬಂಧಪಟ್ಟಂತೆ ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್‌ರವರ ಮೂಲಕ ಇವರು ಕೆಲವು ಮಾಹಿತಿಯನ್ನು ಒದಗಿಸಿದ್ದಾರೆ. ಪ್ರಾಧಿಕಾರಿಗಳು ಅಂಟಿಸಿದ ವೀಸಾ ಇರುವ ಈ ಅರ್ಜಿದಾರನ ಪಾಸ್‌ಪೋರ್ಟ್‌ನ ಒಂದು ಪ್ರತಿಯನ್ನು ಈ ನ್ಯಾಯಾಲಯ ಗಮನಿಸಬೇಕೆಂದು ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ನಾಗರಾಜೇಗೌಡರವರು ಒದಗಿಸಿದ್ದಾರೆ.

11. ದಾಖಲೆಗಳನ್ನು ಅವಲೋಕಿಸಿದ ನಂತರ ಮತ್ತು ಪಕ್ಷಕಾರರ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ನಂತರ ಈ ನ್ಯಾಯಾಲಯದ ಪರಿಗಣನೆಗಾಗಿ ಈ ಮುಂದಿನ ಅಂಶಗಳನ್ನು ಎತ್ತಲಾಗಿದೆ:

> 1) ಮತ್ತೊಂದು ಕಡೆ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳ ಅಡಿಯಲ್ಲಿ ಅರ್ಜಿದಾರನಿಗೆ ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ನಿಯತ ಜಾಮೀನನ್ನು ನೀಡಲು ಈ ಪ್ರಕರಣವು ಸೂಕ್ತವಾಗಿದೆಯೇ?
>
> 2) ಸಂಬಂಧಪಟ್ಟ ಪ್ರಸ್ತುತ ಪ್ರಕರಣದಲ್ಲಿ ಯಾವುದೇ ನಿರ್ದೇಶನಗಳು/ಸಂವಹನಗಳನ್ನು ಅಗತ್ಯಪಡಿಸಲಾಗಿದೆಯೇ?

## ಕಾರಣಗಳು

12. **ಪರಿಶೀಲನಾಂಶ ಸಂಖ್ಯೆ (1):** ಅರ್ಜಿದಾರನು 2.2.1986ರಂದು ನೈಜೀರಿಯಾ ರಾಷ್ಟ್ರದಲ್ಲಿ ಜನಿಸಿದ್ದಾನೆ. ಇವರು ನೈಜೀರಿಯಾದ ಒಕ್ಕೂಟ ಗಣರಾಜ್ಯದಿಂದ ಸಿಂಧುವಾದ ಪಾಸ್‌ಪೋರ್ಟ್‌ನ್ನು ಪಡೆದುಕೊಂಡಿದ್ದಾನೆ. ಪಾಸ್‌ಪೋರ್ಟ್‌ನ್ನು ಹೊರಡಿಸಿದ ದಿನಾಂಕ 17.1.2013 ಆಗಿದ್ದು, 16.10.2018ರ ವರೆಗೆ ಸಿಂಧುವಾಗಿರುತ್ತದೆ. ಇವನು 'ವೈದ್ಯಕೀಯ ಪರಿಚಾರಕ' ನಾಗಿ ಬೆಂಗಳೂರಿಗೆ ಬರಲು ಅನುಮತಿ ನೀಡಲಾಗಿತ್ತೆಂಬುದನ್ನು ಮತ್ತು 28.2.2013ರಿಂದ 13.4.2013ರ ವರೆಗೆ ಉಳಿದುಕೊಳ್ಳಲು ಅನುಮತಿ ನೀಡಲಾಗಿತ್ತೆಂಬುದನ್ನು ಭಾರತ ಗಣರಾಜ್ಯವು ನೀಡಿದ ವೀಸಾ ಮುದ್ರೆಯು ತೋರಿಸುತ್ತದೆ.

13. ಅರ್ಜಿದಾರನು ದಿನಾಂಕ 23.03.2013ರಂದು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತಲುಪಿದ್ದಾನೆ ಮತ್ತು ಪರಿಣಾಮಕಾರಿಯಾಗುವ ಹಾಗೆ ಮುದ್ರೆಯನ್ನು ಹಾಕಲಾಗಿದೆ. ಬೆಂಗಳೂರಿನ ನಂ.226, 2ನೇ ಮಹಡಿ, 9ನೇ ಅಡ್ಡರಸ್ತೆ, ವರ್ಗೋ ನಗರ ಅಂಚೆ, ಮಾರಮ್ಮನ ದೇವಸ್ಥಾನ ಪಕ್ಕ ಭಟ್ಟರಹಳ್ಳಿಯಲ್ಲಿ ವಾಸವಾಗಿರುವ ವೆಂಕಟೇಶ್ ಎಂಬುವರ ಮಗಳಾದ 19 ವರ್ಷ ವಯಸ್ಸಿನ ಹೆಂಗಸು (ಹೆಸರನ್ನು ಸೂಚಿಸಿಲ್ಲ) ದಿನಾಂಕ 01.10.2015ರಂದು ರಾತ್ರಿ 8.45ರಲ್ಲಿ ಮೊದಲ ಮಾಹಿತಿಯ ಆಧಾರದ ಮೇಲೆ ಈತನ ವಿರುದ್ಧ ಪ್ರಕರಣವನ್ನು ದಾಖಲಿಸಲಾಗಿದೆ. ಮೊದಲ ಮಾಹಿತಿಯ ಆಧಾರದ ಮೇಲೆ, ಭಾರತ ದಂಡ ಸಂಹಿತೆಯ 376 ಮತ್ತು 506ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ ಅಪರಾಧ ಸಂ.602/15ರಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ. ಈ ಅರ್ಜಿದಾರನ ವಿರುದ್ಧ ಮಾಡಲಾದ ಆಪಾದನೆಗಳ ಸಾರಾಂಶವೇನೆಂದರೆ, ಬಾಧಿತಳು ದಿನಾಂಕ 23.09.2015ರಂದು ಶರೀನ್ ಎಂಬ ಹೆಸರಿನ ಸ್ನೇಹಿತೆಯೊಂದಿಗೆ ಕ್ರಿಸ್ಟಿನ್ ಎಂಬ ಹೆಸರಿನ ಹೆಂಗಸಿನ ಮನೆಗೆ ಹೋಗಿದ್ದಳು ಎಂಬುದಾಗಿದೆ. ಆ ಸಮಯದಲ್ಲಿ, ಶೆರಿನ್ ಊಟ ತಯಾರಿಸುವುದರಲ್ಲಿ ನಿರತಳಾಗಿದ್ದಳು. ಕ್ರಿಸ್ಟಿನಾಳಿಗೆ ಸೇರಿದ ಸದರಿ ಮನೆಯ ಹಜಾರದಲ್ಲಿ ಮೊದಲ ಮಾಹಿತಿದಾರಳು ಕುಳಿತಿದ್ದಳು. ಆಗ ಈ ಅರ್ಜಿದಾರರು ಅಲ್ಲಿಗೆ ಹೋಗಿ ತನ್ನನ್ನು ಪರಿಚಯಿಸಿಕೊಂಡಿದ್ದಾನೆ ಮತ್ತು ಸ್ವಲ್ಪ ಸಮಯದ ನಂತರ ಸದರಿ ಮನೆಯಲ್ಲಿರುವ ಅವನ ಕೊಠಡಿಗೆ ಹೋಗಲು ಹೇಳಿದ್ದಾನೆ. ಅವಳು ಕೊಠಡಿಯಲ್ಲಿ ಅವನೊಂದಿಗಿರಲು ನಿರಾಕರಿಸಿದ್ದಾಳೆ. ಇದರಿಂದ ಅವಳನ್ನು ಬಲಾತ್ಕಾರವಾಗಿ ಕರೆದುಕೊಂಡಿದ್ದಾನೆ ಮತ್ತು ಬಾಗಿಲನ್ನು ಹಾಕಿಕೊಂಡ ಒಳಗಡೆಯಿಂದ ಅಗಳಿ ಹಾಕಿಕೊಂಡಿದ್ದಾನೆ. ಆಗ ಅವನು ಅವಳ ಬಾಯಿ ಮುಚ್ಚಿ ಬಲಾತ್ಕಾರವಾಗಿ ಅವಳ ಮೇಲೆ ಅತ್ಯಾಚಾರವೆಸಗಿದ್ದಾನೆ. ಇದರ ಬಗ್ಗೆ ಬೇರೆ ಯಾರಿಗಾದರೂ ತಿಳಿಸಿದರೆ, ಭಯಂಕರ ಪರಿಣಾಮಗಳನ್ನು ಎದುರಿಸಬೇಕೆಂದು ಬೆದರಿಸಿದೆನೆಂದು ಹೇಳಿದ್ದಾನೆ. ಕೆಲವು ದಿನಗಳ ನಂತರ, ಬಾಧಿತಳು, ಅರ್ಜಿದಾರನ ಬಳಿಗೆ ಕರೆದುಕೊಂಡು ಹೋಗಿದ್ದ ಶೆರಿನ್‌ಗೆ ಘಟನೆಯನ್ನು ತಿಳಿಸಿದ್ದಾಳೆ ಮತ್ತು ಅವನು ಯಾಕೆ ಹಾಗೆ ಮಾಡಿದ ಎಂಬುದರ ಬಗ್ಗೆ ಕೇಳಿದ್ದಾಳೆ. ಮೊದಲ ಮಾಹಿತಿದಾರಳಿಗೆ ತುಂಬಾ ನೋವಿದ್ದುದರಿಂದ ಅವಳನ್ನು ಚಿಕಿತ್ಸೆಗಾಗಿ ದಿನಾಂಕ 28.09.2015ರಂದು ಕೆ.ಆರ್. ಪುರಂ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದಾಳೆ

ಮತ್ತು ಅರ್ಜಿದಾರನನ್ನು ಫೋನಿನಲ್ಲಿ ಸಂಪರ್ಕಿಸಿದ್ದಾಳೆ. ಮಾಧ್ಯಮದವರು ಮತ್ತು ಪೊಲೀಸಿನವರು ತನ್ನನ್ನು ಹಿಂಬಾಲಿಸುತ್ತಿರುವುದರಿಂದ ಭೇಟಿ ಮಾಡಬಾರದೆಂದು ಹೇಳಿ ಅವಳಿಂದ ತಪ್ಪಿಕೊಂಡಿದ್ದಾನೆ. ಅವಳು ಈ ಸಂಗತಿಯನ್ನು ಬಹಿರಂಗಪಡಿಸಿದರೆ, ಜನರ ಕಣ್ಣಲ್ಲಿ ಅವಳ ಗೌರವ ಹಾಳಾಗುತ್ತದೆಂದು ಯೋಚಿಸಿದ್ದಾಳೆ. ಅನೇಕ ಬಾರಿ ಅವಳು ಅರ್ಜಿದಾರನೊಂದಿಗೆ ದೂರವಾಣಿ ಮುಖಾಂತರ ಮಾತಾಡಿದ್ದಾಳೆ ಮತ್ತು ಅವನು, ಅವಳಿಗೆ ತಾನೇನು ಮಾಡಿದ್ದೆನೆಂಬುದರ ಬಗ್ಗೆ ಅಪರಾಧಿ ಭಾವ ಕಾಡಿದೆ. ನಂತರ, ಅವನು ಅವಳನ್ನು ಮದುವೆಯಾಗುವ ಭರವಸೆ ನೀಡಿ, ಅವನ ಮನೆಯ ಬಳಿ 1.10.2015ರಂದು ಬರಲು ಅವಳಿಗೆ ಹೇಳಿದ್ದಾನೆ ಮತ್ತು ಅವನ ತಂದೆ ತಾಯಿಗಳು ನೈಜೀರಿಯಾದಿಂದ ಬಂದ ನಂತರ ತಾನು ಅವಳನ್ನು ವಿವಾಹವಾಗುವೆನೆಂದು ಹೇಳಿದ್ದಾನೆ.

14. ಇಲ್ಲಿನ ಅರ್ಜಿದಾರನ ಮಾತುಗಳನ್ನು ನಂಬಿದ ಅವಳು 1.10.2015ರಂದು ಬೆಳಿಗ್ಗೆ 10 ಗಂಟೆಗೆ ಅವನ ಮನೆಯ ಸಮೀಪ ಹೋಗಿದ್ದಾಳೆ, ಸದರಿ ಮನೆಯಲ್ಲಿ ಅರ್ಜಿದಾರನನ್ನು ಹೊರತುಪಡಿಸಿದರೆ ಬೇರಾರು ಅಲ್ಲಿರಲಿಲ್ಲ ಮತ್ತು ಅವನು ಅವಳನ್ನು ಕೊಠಡಿಗೆ ಕರೆದೊಯ್ದು ಉಂಗುರವನ್ನು ನೀಡಿ, ತಾನು ಅವಳ ಗಂಡನೆಂದು ಮತ್ತೆ ಅತ್ಯಾಚಾರವೆಸಗಿದ್ದಾನೆ ಈ ಘಟನೆಯಾದ ಮೇಲೆ ಯೋಚಿಸಿದ ನಂತರ ಅವಳು ದೂರನ್ನು ದಾಖಲಿಸಲು ನಿರ್ಧರಿಸಿದ್ದಾಳೆ.

15. ತನಿಖೆ ನಡೆಯುವ ಅವಧಿಯಲ್ಲಿ, ಎದುರುದಾರ ಪೊಲೀಸರಿಗೆ, ಅರ್ಜಿದಾರನು ವಿದೇಶೀಯನಾಗಿದ್ದು, ಇವನು ಭಾರತದಲ್ಲಿ ಅವಧಿ ಮೀರಿ ವಾಸಿಸುತ್ತಿದ್ದನು ಎಂಬುದು ಗೊತ್ತಾಗಿದೆ ಮತ್ತು ವಿದೇಶೀಯರ ಅಧಿನಿಯಮದ 14ನೇ ಪ್ರಕರಣದ ಸಂಬಂಧದಲ್ಲಿ ಇದನ್ನು ಅನ್ವಯಿಸಲಾಗಿದೆ. ಸದರಿ ಅಧಿನಿಯಮದ 14ನೇ ಪ್ರಕರಣವು, ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿರುವುದರ ಸಂಬಂಧ ದಂಡವನ್ನು ವಿಧಿಸಲಾಗಿದೆ. 2004ನೇ ವರ್ಷದಲ್ಲಿ 2004ರ ಅಧಿನಿಯಮ ಸಂಖ್ಯೆ 16ರ ಮೂಲಕ ಇದನ್ನು ತಿದ್ದುಪಡಿ ಮಾಡಲಾಗಿತ್ತು ತಿದ್ದುಪಡಿಯು, 20.4.2004ರಿಂದ ಜಾರಿಗೆ ಬಂದಿರುತ್ತದೆ. ತಿದ್ದುಪಡಿಯಂತೆ ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

***14. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗೆ ದಂಡ, ಇತ್ಯಾದಿ.–***

*ಯಾರೇ ವ್ಯಕ್ತಿಯು,–*

*(ಎ) ಅವರಿಗೆ ವೀಸಾವನ್ನು ನೀಡಿದ ಅವಧಿಯನ್ನು ಮೀರಿದ ಅವಧಿಯಲ್ಲಿ ಯಾವುದೇ ಪ್ರದೇಶದಲ್ಲಿ ಉಳಿದಿರುವುದು;*

*(ಬಿ) ಭಾರತದಲ್ಲಿ ಅಥವಾ ಈ ಮುಂದಿನ ಯಾವುದೇ ಭಾಗದಲ್ಲಿ ಅವನು ಪ್ರವೇಶಿಸುವುದಕ್ಕಾಗಿ ಮತ್ತು ಉಳಿದುಕೊಳ್ಳುವುದಕ್ಕಾಗಿ ಹೊರಡಿಸಿದ ಸಿಂಧುವಾದ ವೀಸಾದ ಷರತ್ತುಗಳ ಉಲ್ಲಂಘನೆಯಲ್ಲಿ ಯಾವುದಾದರೂ ಕೃತ್ಯ ನಡೆಸಿರುವ;*

*(ಸಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಅಥವಾ ಈ ಅಧಿನಿಯಮಕ್ಕನುಸಾರವಾಗಿ ನೀಡಿದ ಯಾವುದೇ ನಿರ್ದೇಶನ ಅಥವಾ ಈ ಅಧಿನಿಯಮದ ಮೇರೆಗೆ ಅಂಥ ಯಾವ ಆದೇಶಕ್ಕೆ ನಿರ್ದಿಷ್ಟ ದಂಡನೆಯನ್ನು ಉಪಬಂಧಿಸಿಲ್ಲವೋ ಅದನ್ನು ಉಲ್ಲಂಘಿಸಿರುವ;*

*– ಯಾರೇ ವ್ಯಕ್ತಿಯನ್ನು ಐದು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿಸತಕ್ಕದ್ದು ಮತ್ತು 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಎಫ್) ಖಂಡಕ್ಕನುಸಾರವಾಗಿ ಅವನು ಬಂಧಪತ್ರವನ್ನು ಮಾಡಿಕೊಂಡಿದ್ದರೆ, ಆತನ ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು ಆ ಮೂಲಕ ಬದ್ಧನಾದ ಯಾರೇ ವ್ಯಕ್ತಿಯು ದಂಡವನ್ನು ಪಾವತಿಸತಕ್ಕದ್ದು, ಅವನ ಮೂಲಕ ಸಂದಾಯ ಮಾಡಬಾರದು.*

> ***ವಿವರಣೆ:*** *ಈ ಪ್ರಕರಣದ ಉದ್ದೇಶಗಳಿಗಾಗಿ, "ವೀಸಾ" ಎಂಬ ಪದಾವಳಿಯು ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ನಿಯಮಗಳು, 1950ರ ಮೇರೆಗೆ, ಪಾಸ್‌ಪೋರ್ಟ್ (ಭಾರತದೊಳಗೆ ಪ್ರವೇಶ) ಅಧಿನಿಯಮ, 1920(1920ರ 34)ರ ಮೇರೆಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.*

ಮೂಲ ಪಾಸ್‌ಪೋರ್ಟ್‌ನ್ನು ಈ ನ್ಯಾಯಾಲಯದ ಅವಗಾಹನೆಗಾಗಿ ಸಲ್ಲಿಸಲಾಗಿತ್ತು. ಪಾಸ್‌ಪೋರ್ಟ್‌ನ ಜೆರಾಕ್ಸ್ ಪ್ರತಿಯೊಂದಿಗೆ ಇದನ್ನು ಹೋಲಿಕೆ ಮಾಡಿದ ನಂತರ ಮೂಲ ಪ್ರತಿಯನ್ನು, ಅರ್ಜಿದಾರರ ಪರ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ನಾಗರಾಜೇಗೌಡರಿಗೆ ಹಿಂದಿರುಗಿಸಲಾಗಿದೆ.

16. ಒಪ್ಪಿಕೊಂಡಿರುವ ಹಾಗೆ ಅರ್ಜಿದಾರನು 28.02.2013ರಿಂದ 13.4.2013ರ ವರೆಗೆ ಭಾರತದಲ್ಲಿ ಉಳಿಯಲು ಅರ್ಹತೆ ಹೊಂದಿದ್ದನೆಂಬುದನ್ನು ಮತ್ತು 13.4.2013ರ ಮಧ್ಯರಾತ್ರಿಯಂದು ಇದು ಮುಕ್ತಾಯಗೊಂಡಿದ್ದರು ವೀಸಾವನ್ನು ವಿಸ್ತರಿಸಿಕೊಂಡಿರಲಿಲ್ಲವೆಂಬುದನ್ನು ಭಾರತ ಗಣರಾಜ್ಯವು ಮುದ್ರೆ ಹಾಕಿದ ವೀಸಾ ಪ್ರಕಟಪಡಿಸುತ್ತದೆ. ಈ ನಡುವೆ ಅವನು ತನ್ನ ವೀಸಾವನ್ನು ವಿಸ್ತರಿಸಿಕೊಳ್ಳಲು ಮನವಿ ಸಲ್ಲಿಸುವುದರೊಂದಿಗೆ ಪ್ರಾಧಿಕಾರಗಳಿಗೆ ಮೊರೆಹೋಗಿದ್ದನೆಂಬುದನ್ನು ತೋರಿಸಲು ದಾಖಲೆಯಲ್ಲಿ ಏನನ್ನೂ ಇಟ್ಟಿರುವುದಿಲ್ಲ.

17. ನಿರ್ದಿಷ್ಟ ಉದ್ದೇಶಗಳಿಗಾಗಿ ಮಾತ್ರ ಪಾಸ್‌ಪೋರ್ಟ್‌ನ್ನು ಹೊಂದಿರುವ ವಿದೇಶೀಯನಿಗೆ ಈ ದೇಶವು ವೀಸಾವನ್ನು ಹೊರಡಿಸುತ್ತದೆ, ಎಂದರೆ, (i) ಶಿಕ್ಷಣ, (ii) ಪ್ರವಾಸೋದ್ಯಮ, (iii) ವೈದ್ಯಕೀಯ ಚಿಕಿತ್ಸೆ, (iv) ವ್ಯವಹಾರ ಮತ್ತು (v) ಉದ್ಯೋಗಕ್ಕೆ, ಯಾವ ಅವಧಿಗೆ ವೀಸಾವನ್ನು ಹೊರಡಿಸಬೇಕೋ ಆ ಅವಧಿಯನ್ನು ಸೂಚಿಸಲಾಗಿರುತ್ತದೆ ಮತ್ತು ವೀಸಾದಲ್ಲಿ ಸೂಚಿಸಲಾದಂಥ ಸದರಿ ಅವಧಿಯನ್ನು ಮೀರಿ ವಾಸ ಮಾಡುವ ಯಾರೇ ವ್ಯಕ್ತಿಯು ಅಧಿನಿಯಮದ 14ನೇ ಪ್ರಕರಣದ ದಂಡನೀಯ ಉಪಬಂಧಗಳನ್ನು ಅನ್ವಯಿಸುವ ವಿದೇಶೀಯರ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವನು, ಅವಧಿ ಮೀರಿ ವಾಸಿಸುವುದಕ್ಕೆ

ಸಂಬಂಧಿಸಿದ ಕಾರಾವಾಸ ಶಿಕ್ಷೆಯನ್ನು ಐದು ವರ್ಷಗಳಿಗೆ ವಿಸ್ತರಿಸಬಹುದು ಮತ್ತು ದಂಡವನ್ನು ಸಂದಾಯ ಮಾಡಲು ಸಹ ಹೊಣೆಗಾರನಾಗಿರತಕ್ಕದ್ದು.

18. ವಿದೇಶೀಯರ ಆದೇಶ 1948, ವಿದೇಶಿಯರ ಅಧಿನಿಯಮ, 1946ರ 3ನೇ ಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕಾರ್ಯ ನಿರ್ವಾಹಕರು ಹೊರಡಿಸಿದ ಶಾಸನಬದ್ಧ ಆದೇಶವಾಗಿದೆ. ವಿದೇಶೀಯರ ಆದೇಶ, 1948ರ 7ನೇ ಆದೇಶವು, ಭಾರತದಲ್ಲಿ ಉಳಿದುಕೊಳ್ಳುವುದನ್ನು ನಿರ್ಬಂಧಪಡಿಸುವುದನ್ನು ಕುರಿತುದರ ಬಗ್ಗೆ ತಿಳಿಸುತ್ತದೆ. ಆದೇಶ 7 ರಲ್ಲಿ ಮೂರು ಉಪ–ಖಂಡಗಳಿವೆ ಮತ್ತು ಇದನ್ನು ಕೆಳಗೆ ಉದ್ಧೃತಗೊಳಿಸಲಾಗಿದೆ:

**7. ಭಾರತದಲ್ಲಿ ಉಳಿದುಕೊಳ್ಳಲು ನಿರ್ಬಂಧ,–**

*(1) ಭಾರತೀಯ ಪಾಸ್‌ಪೋರ್ಟ್‌ಗಳ ಅಧಿನಿಯಮ, 1920ಕ್ಕೆ (1920ರ xxxiv) ಅನುಸಾರವಾಗಿ ಹೊರಡಿಸಲಾದ ವೀಸಾದ ಹಕ್ಕಿನ ಮೇಲೆ ಭಾರತವನ್ನು ಪ್ರವೇಶಿಸಿರುವ ಪ್ರತಿಯೊಬ್ಬ ವಿದೇಶಿಯನು, ಅಧಿಕಾರ ವ್ಯಾಪ್ತಿ ಹೊಂದಿರುವ ನೋಂದಣಿ ಅಧಿಕಾರಿಯಿಂದ, ''ಯಾವ ಸ್ಥಳದಲ್ಲಿ ವಿದೇಶಿಯನು ಭಾರತವನ್ನು ಪ್ರವೇಶಿಸಿರುವನೋ ಆ ಸ್ಥಳದಲ್ಲಾಗಲಿ ಅಥವಾ ಯಾವ ಸ್ಥಳದಲ್ಲಿ ಅವನು, ವಿದೇಶೀಯರ ನೋಂದಣಿ ನಿಯಮಗಳು, 1939ರ 6ನೇ ನಿಯಮಕ್ಕನುಸಾರವಾಗಿ ನೋಂದಣಿ ವರದಿಯನ್ನು ಸಲ್ಲಿಸಿರುವನೋ ಆ ಸ್ಥಳದಲ್ಲಾಗಲಿ ಅವನು ಭಾರತದಲ್ಲಿ ಉಳಿಯಲು ಅಧಿಕೃತನಾಗಿರುವ ಅವಧಿಯನ್ನು ಸೂಚಿಸಿ ಮತ್ತು ಭಾರತದಲ್ಲಿ ವಾಸಿಸಲು ವೀಸಾದಲ್ಲಿ ನಿರ್ದಿಷ್ಟಪಡಿಸಲಾದ ಸ್ಥಳ ಅಥವಾ ಸ್ಥಳಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸಹ ಸೂಚಿಸಿ ಅನುಮತಿಯನ್ನು ಪಡೆಯತಕ್ಕದ್ದು. ಅಂಥ ಅನುಮತಿಯನ್ನು ನೀಡುವಲ್ಲಿ ಸದರಿ ನೋಂದಣಾಧಿಕಾರಿಯು ವೀಸಾದಲ್ಲಿ*

*ನಿರ್ದಿಷ್ಟಪಡಿಸಲಾದ ಯಾವುದೇ ಸ್ಥಳಗಳಲ್ಲಿ ವಿದೇಶಿಯನು ವಾಸಿಸುವುದನ್ನು ನಿರ್ಬಂಧಿಸಬಹುದು.*

*(2) (1)ನೇ ಉಪ-ಕಂಡಿಕೆಯು ಉಪಬಂಧಗಳು ಯಾವ ವಿದೇಶೀಯನಿಗೆ ಅನ್ವಯವಾಗುವುದಿಲ್ಲವೋ ಆ ಪ್ರತಿಯೊಬ್ಬ ವಿದೇಶಿಯನು, ವಿದೇಶೀಯರ ನೋಂದಣಿ ನಿಯಮಗಳು, 1939ರ 6ನೇ ನಿಯಮಕ್ಕೆ ಅನುಸಾರವಾಗಿ ನೋಂದಣಿ ವರದಿಯನ್ನು ಯಾವ ನೋಂದಣಿ ಅಧಿಕಾರಿಗೆ ಸಲ್ಲಿಸುವನೋ ಅವರಿಂದ ಭಾರತದಲ್ಲಿ ಉಳಿಯಲು ಅಧಿಕೃತನಾದ ಅವಧಿಯನ್ನು ಸೂಚಿಸಿ ಅನುಮತಿಯನ್ನು ಪಡೆಯತಕ್ಕದ್ದು.*

*(3) ಉಪ-ಕಂಡಿಕೆಯ (1) ಅಥವಾ ಉಪ-ಕಂಡಿಕೆ (2)ರ ಮೇರೆಗೆ ಯಾವ ವಿದೇಶೀಯನಿಗೆ ಅನುಮತಿಯನ್ನು ನೀಡಲಾಗಿದೆಯೋ ಆ ಪ್ರತಿಯೊಬ್ಬ ವಿದೇಶೀಯನು,*

*(i) ಭಾರತದಲ್ಲಿ ವಾಸಿಸಲು ಸೂಚಿಸಿದ ಸ್ಥಳ ಅಥವಾ ಸ್ಥಳಗಳ ಹೊರತಾಗಿ ಅನುಮತಿ ಪತ್ರದಲ್ಲಿ ಸ್ಥಳಗಳನ್ನು ಸೂಚಿಸಿದ್ದರೆ, ಅಂಥ ಸ್ಥಳಗಳಿಗೆ ಕೇಂದ್ರ ಸರ್ಕಾರವು, ಅನುಮತಿ ಪತ್ರವನ್ನು ವಿಸ್ತರಿಸಿದ ಹೊರತು ಯಾವುದೇ ಇತರ ಸ್ಥಳಕ್ಕೆ ಭೇಟಿ ನೀಡತಕ್ಕದ್ದಲ್ಲ.*

*(ii) ಭಾರತದಲ್ಲಿ ವಾಸಿಸಲು ಸ್ಥಳ ಅಥವಾ ಸ್ಥಳಗಳನ್ನು ಅನುಮತಿ ಪತ್ರದಲ್ಲಿ ಸೂಚಿಸಿದ್ದರೆ ಸ್ಥಳವನ್ನು ತಲುಪಿದ ನಂತರ ಅಥವಾ ಸಂದರ್ಭಾನುಸಾರ ಅವನ ಉದ್ದೇಶಿತ ಸ್ಥಳಕ್ಕೆ ಹೊರಡುವ ಮುಂಚೆ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಅಂಥ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನೋಂದಣಾಧಿಕಾರಿಗೆ*

*ಅಂಥ ಯಾವುದೇ ಸ್ಥಳಕ್ಕೆ ಬಂದು ತಲುಪುವ ಮತ್ತು ಅಲ್ಲಿಂದ ಹೊರಡುವ ಸ್ಥಳವನ್ನು ಖುದ್ದಾಗಿ ಅಥವಾ ಲಿಖಿತದಲ್ಲಿ ವರದಿ ಮಾಡತಕ್ಕದ್ದು.*

*(iii) ಅನುಮತಿಯಲ್ಲಿ ಸೂಚಿಸಿದ ಅವಧಿಯನ್ನು ಕೇಂದ್ರ ಸರ್ಕಾರವು ವಿಸ್ತರಿಸಿದ ಹೊರತು, ಸದರಿ ಅವಧಿಯ ಮುಕ್ತಾಯಕ್ಕೆ ಮುಂಚೆ ಭಾರತದಿಂದ ಹೊರಡುವ; ಮತ್ತು ಭಾರತದಿಂದ ವಿದೇಶೀಯನು ಹೊರಡುವ ಸಮಯದಲ್ಲಿ, ಅವನು ಹೊರಡುವ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನೋಂದಣಾಧಿಕಾರಿಗೆ ಅನುಮತಿ ಪತ್ರವನ್ನು ಸಲ್ಲಿಸತಕ್ಕದ್ದು.*

19. ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಮಾನ್ಯ ಶ್ರೀ ಕೃಷ್ಣ ದೀಕ್ಷಿತ್‌ರವರು, ಯಾವ ಉದ್ದೇಶಕ್ಕೆ ವೀಸಾವನ್ನು ಒಮ್ಮೆ ಹೊರಡಿಸಲಾಗಿದೆಯೋ ಆ ಉದ್ದೇಶಕ್ಕೆ ಯಾವುದೇ ದರದಲ್ಲಿ ಮಾರ್ಪಡಿಸಲಾಗುವುದಿಲ್ಲವೆಂದು ನಿವೇದಿಸಿದ್ದಾರೆ. 'ವೈದ್ಯಕೀಯ ಪರಿಚಾರಕ' ಎಂಬ ಪ್ರವರ್ಗದ ಅಡಿಯಲ್ಲಿ ವ್ಯಕ್ತಿಯು ವೀಸಾವನ್ನು ಪಡೆದುಕೊಂಡಿದ್ದರೆ, ಅವನು ಭಾರತದಲ್ಲಿ ವ್ಯವಹಾರವನ್ನು ನಡೆಸುವುದಕ್ಕೆ ಅನುಮತಿಸುವುದಕ್ಕೆ ಸಾಧ್ಯವಿಲ್ಲ ಎಂದು ಅವರು ನಿವೇದಿಸಿದ್ದಾರೆ. ಇವರು, 7ನೇ ಕ್ರಮಾದೇಶದ 3ನೇ ಉಪ–ಆದೇಶದ (iii)ನೇ ಉಪ–ಖಂಡವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಇದು, ಯಾವ ವಿದೇಶೀಯನಿಗೆ 7ನೇ ಆದೇಶದ (2)ನೇ ಉಪ–ಆದೇಶದ (i)ನೇ ಉಪ–ಖಂಡದಲ್ಲಿ ಅನುಮತಿಯನ್ನು ನೀಡಲಾಗಿದೆಯೋ ಆ ವೀಸಾ ಧಾರಕನು ಭಾರತದಲ್ಲಿ ಉಳಿಯಲಾಗುವುದಿಲ್ಲ ಮತ್ತು ಮೂಲ ವೀಸಾದಲ್ಲಿ ಸೂಚಿಸಲಾದ ಅವಧಿಯನ್ನು ವಿಸ್ತರಿಸಿಕೊಳ್ಳಬಹುದು ಆದರೆ ವೀಸಾದ ಅವಧಿ ಮುಕ್ತಾಯವಾಗುವ ಮೊದಲು ಅನುಮತಿಯನ್ನು ವಿಸ್ತರಿಸಿಕೊಳ್ಳಬಹುದು.

20. ಅರ್ಜಿದಾರನು, ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯಲ್ಲಿ, ತಾನು ಬೆಂಗಳೂರಿನಲ್ಲಿ ನಡೆಸುತ್ತಿರುವ ವೃತ್ತಿಯ

ಕುರಿತು ಇಲ್ಲಿ ಏನನ್ನೂ ಸೂಚಿಸಿಲ್ಲ ಮತ್ತು ಬೆಂಗಳೂರಿನಲ್ಲಿ ತಾನು ಅವಧಿ ಮೀರಿ ವಾಸಿಸುತ್ತಿರುವುದಕ್ಕೆ ಯಾವುದೇ ಕಾರಣವನ್ನು ತಿಳಿಸಿಲ್ಲ.

21. ವಿದೇಶೀಯರ ನೋಂದಣಿ ಅಧಿನಿಯಮ, 1939 ದಿನಾಂಕ 8.4.1939ರಲ್ಲಿ ಜಾರಿಗೆ ಬಂದಿದೆ. ಈ ಅಧಿನಿಯಮವು, ಭಾರತದಲ್ಲಿರುವ ವಿದೇಶೀಯರ ನೋಂದಣಿಯ ಬಗ್ಗೆ ತಿಳಿಸುತ್ತದೆ. ಸದರಿ ಅಧಿನಿಯಮದ 4ನೇ ಪ್ರಕರಣವು ರುಜುವಾತಿನ ಹೊಣೆಯ ಬಗ್ಗೆ ತಿಳಿಸುತ್ತದೆ. ವ್ಯಕ್ತಿಯು ವಿದೇಶೀಯನಾಗಿರುವನೇ ಅಥವಾ ಇಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅಂಥ ವ್ಯಕ್ತಿಯು ನಿರ್ದಿಷ್ಟ ವರ್ಗದ ಅಥವಾ ಲಕ್ಷಣವನ್ನು ರುಜುವಾತುಪಡಿಸುವ ಜವಾಬ್ದಾರಿ ಅಂಥ ವ್ಯಕ್ತಿಯ ಮುಂದಿರುತ್ತದೆ. ವಿದೇಶೀಯರ ಅಧಿನಿಯಮದ 4ನೇ ಪ್ರಕರಣಕ್ಕೆ ಸಂಬಂಧಪಟ್ಟಿದ್ದು ಅದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

> *"**4. ರುಜುವಾತಿನ ಭಾರ.**– ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮಕ್ಕೆ ಸಂಬಂಧಿಸಿ, ಯಾರೇ ವ್ಯಕ್ತಿಯು ವಿದೇಶಿಯನೇ ಅಥವಾ ಅಲ್ಲವೇ ಅಥವಾ ವಿಶಿಷ್ಟ ವರ್ಗದ ಅಥವಾ ವರ್ಣನೆಯ ವಿದೇಶೀಯನೇ ಅಥವಾ ಅಲ್ಲವೇ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಭಾರತ ಸಾಕ್ಷ್ಯ ಅಧಿನಿಯುಮ, 1872ರಲ್ಲಿ (1872 ರ 1) ಏನೇ ಅಡಕವಾಗಿದ್ದಾಗ್ಯೂ, ಸಂದರ್ಭಾನುಸಾರ ಅಂಥ ವ್ಯಕ್ತಿಯು ವಿದೇಶೀಯನಲ್ಲ ಅಥವಾ ಅಂಥ ವಿಶಿಷ್ಟ ವರ್ಗದ ಅಥವಾ ವರ್ಣನೆಯ ವಿದೇಶೀಯನಲ್ಲ ಎಂದು ರುಜುವಾತುಪಡಿಸುವ ಹೊಣೆಯು*
>
> *– ಅಂಥ ವ್ಯಕ್ತಿಯ ಮೇಲಿರತಕ್ಕದ್ದು.*
>
> *ವಿದೇಶೀಯರ ನೋಂದಣಿ ಅಧಿನಿಯಮ, 1939ರ 5ನೇ ಪ್ರಕರಣವು ದಂಡನೆಗಳನ್ನು ಉಪಬಂಧಿಸುತ್ತದೆ. ಇದನ್ನು ಕೆಳಗೆ ಉದ್ಧೃತಗೊಳಿಸಲಾಗಿದೆ.*

*"**5. ದಂಡನೆಗಳು:–** ಈ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ನಿಯಮವನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಅನುಸರಿಸಲು ವಿಫಲವಾಗುವ ಯಾರೇ ವ್ಯಕ್ತಿಯು, ವಿದೇಶೀಯನಾಗಿದ್ದರೆ, ಒಂದು ವರ್ಷಕ್ಕೆ ವಿಸ್ತರಿಸಬಹುದಾದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಅವಧಿಗೆ ಅಥವಾ ಅವೆರಡರಿಂದಲೂ ಅಥವಾ ವಿದೇಶೀಯನಾಗಿರದಿದ್ದರೆ, ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.*

ವಿದೇಶೀಯರ ನೋಂದಣಿ ಅಧಿನಿಯಮ, 1939ರ 6ನೇ ಪ್ರಕರಣವು ಇನ್ನೂ ಜಾರಿಗೆ ಬಂದಿರುವುದಿಲ್ಲ ಮತ್ತು ಈ ಪ್ರಕರಣದ ಸಂಗತಿಗಳಿಗೂ ಸಹ ಇದು ಅನ್ವಯವಾಗುತ್ತದೆ. ಅವಶ್ಯವಾಗಿ, ತನಿಖಾ ಪ್ರಾಧಿಕಾರಗಳು ಇದನ್ನು ಗಮನಕ್ಕೆ ತೆಗೆದುಕೊಂಡಿರುವುದಿಲ್ಲ. ಯುಕ್ತ ಆರೋಪಗಳನ್ನು ರೂಪಿಸುವಾಗ ಈ ಪ್ರಕರಣದ ಸಂಗತಿಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮವನ್ನು ಸಹ ಗಣನೆಗೆ ತೆಗೆದುಕೊಳ್ಳಲು ಈ ನ್ಯಾಯಾಲಯದ ಮಾರ್ಗಕ್ಕೆ ಯಾವುದೂ ಅಡ್ಡಿ ಬರುವುದಿಲ್ಲ.

22. ವಿದೇಶೀಯರ ನೋಂದಣಿ ನಿಯಮಗಳು, 1992, ಸಹ ಜಾರಿಗೆ ಬಂದಿರುತ್ತದೆ. 6ನೇ ನಿಯಮವು, ಭಾರತದಲ್ಲಿರುವ ವಿದೇಶೀಯನ ಮತ್ತು ಅವರ ವಿಳಾಸದ ವರದಿ ಬಗ್ಗೆ ಹೇಳುತ್ತದೆ. 6ನೇ ನಿಯಮವು ಇದಕ್ಕೆ ಸಂಬಂಧಪಟ್ಟಿದ್ದು ಈ ಕೆಳಗೆ ಉದ್ಧೃತಗೊಳಿಸಲಾಗಿದೆ.

***6. ವಿದೇಶೀಯನು ಭಾರತದಲ್ಲಿ ತನ್ನ ವಿಳಾಸವನ್ನು ವರದಿ ಮಾಡುವುದು ಇತ್ಯಾದಿ.–***

*(1) ಭಾರತವನ್ನು ಪ್ರವೇಶಿಸಿದ ಅಥವಾ ಭಾರತದ ನಿವಾಸಿಯಾದ ಪ್ರತಿಯೊಬ್ಬ ವಿದೇಶೀಯನು, 7ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ*

*ಯುಕ್ತ ನೋಂದಣಿ ಅಧಿಕಾರಿಗೆ ಆ ನಿಯಮದೊಳಗೆ ನಿರ್ದಿಷ್ಟಪಡಿಸಲಾದ ಸಮಯದೊಳಗೆ ವರದಿಯನ್ನು (ಇಲ್ಲಿ ಇನ್ನು ಮುಂದೆ ನೋಂದಣಿ ವರದಿಯೆಂದು ಉಲ್ಲೇಖಿಸಲಾಗಿದೆ)*

*ಖುದ್ದಾಗಿ ಅಥವಾ ಅಧಿಕೃತ ಪ್ರತಿನಿಧಿಯ ಮೂಲಕ ಸಲ್ಲಿಸತಕ್ಕದ್ದು;*

*ಪರಂತು, ಒಂದುನೂರ ಎಂಬತ್ತು ದಿನಗಳಿಗಿಂತ ಹೆಚ್ಚಾಗಿರದ ಅವಧಿಗೆ ಸಿಂಧುವಾದ ವೀಸಾದ ಆಧಾರದ ಮೇಲೆ ಭಾರತವನ್ನು ಪ್ರವೇಶಿಸಿರುವ ಮತ್ತು ಸದರಿ ಅವಧಿಯನ್ನು ಮೀರಿ ಭಾರತದಲ್ಲಿ ಉಳಿಯದಿರುವ ವಿದೇಶೀಯನ ಪ್ರಕರಣದಲ್ಲ ಅಂಥ ವರದಿಯ ಅಗತ್ಯವಿರುವುದಿಲ್ಲ.*

*2. ಪ್ರತಿಯೊಂದು ನೋಂದಣಿ ವರದಿಯನ್ನು ಲಿಖಿತದಲ್ಲಿ, ಇಂಗ್ಲೀಷ್‌ನಲ್ಲಿ ಅಥವಾ ಹಿಂದಿ ಭಾಷೆಯಲ್ಲಿ ರಚಿಸತಕ್ಕದ್ದು ಮತ್ತು ನಾಲ್ಕು ಪ್ರತಿಯಲ್ಲಿ ಇರತಕ್ಕದ್ದು ಮತ್ತು ಭಾರತದಲ್ಲಿನ ವಿದೇಶೀಯನ ವಿಳಾಸದ ನಿಜವಾದ ವಿವರಣೆಯನ್ನು ಮತ್ತು ಎ ನಮೂನೆಯ (iv)ನೇ ಕಂಡಿಕೆಯುಲ್ಲಿನ 10 ರಲ್ಲಿ 2ನೇ ಬಾಬ್ತಿನಲ್ಲಿ ನಿರ್ದಿಷ್ಟಪಡಿಸಲಾದ ಇತರ ವಿವರಗಳನ್ನು ಹಾಗೂ ಯುಕ್ತವಾಗಿರಬಹುದಾದ ಅದರ 12 ರಿಂದ 16 ರವರೆಗಿನ ಬಾಬ್ತುಗಳಲ್ಲಿ ನಿರ್ದಿಷ್ಟಪಡಿಸಲಾದ ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.*

*3. (2) ನೇ ಉಪ–ನಿಯಮದ ಉದ್ದೇಶಗಳಿಗಾಗಿ, ಭಾರತದಲ್ಲಿರುವ ವಿದೇಶೀಯನ ವಿಳಾಸವು –*

*(ಎ) ಅವನ ನಿವಾಸದ ಸ್ಥಳವಾಗಿರತಕ್ಕದ್ದು ಅಥವಾ*

(ಬಿ) ಅವನು ನಿವಾಸವನ್ನು ಹೊಂದಿರದಿದ್ದರೆ, ಅವನ ನೋಂದಣಿ ವರದಿಯನ್ನು ರೂಪಿಸುವ ಅವಧಿಯಲ್ಲಿ ಅವನು ತತ್ಕಾಲದಲ್ಲಿ ಯಾವ ಸ್ಥಳದಲ್ಲಿ ವಾಸಿಸುತ್ತಿದ್ದನೋ ಆ ಸ್ಥಳ ಅಥವಾ ಭಾರತವನ್ನು ಅವನು ತಲುಪಿದ ನಂತರ ವಾಸಿಸಲು ಮೊದಲು ಉದ್ದೇಶಿಸಿದ ಸ್ಥಳವು ಅವನ ನಿವಾಸದ ಸ್ಥಳವಾಗಿರತಕ್ಕದ್ದು.

ಪರಂತು, ಭಾರತದಲ್ಲಿ ನಿವಾಸ ಹೊಂದಿರದ ಯಾರೇ ವಿದೇಶೀಯನು ನೋಂದಣಾಧಿಕಾರಿಯ ಅನುಮೋದನೆಗೊಳಪಟ್ಟು ಬ್ಯಾಂಕರನಾಗಿರುವ ಅಥವಾ ಹೋಟೆಲಿನ ಆಡಳಿತ ವರ್ಗ ಹೊಂದಿರುವ ವ್ಯಕ್ತಿಯಾಗಿರುವ ಅಥವಾ ಪ್ರವಾಸಿ ಅಥವಾ ಪ್ರಯಾಣ ಏಜೆನ್ಸಿಯಾಗಿರುವ ಭಾರತದಲ್ಲಿ ವಾಸಿಸುವ ಭಾರತೀಯ ನಾಗರಿಕನ ಸಮ್ಮತಿಯನ್ನು ಮೊದಲೇ ಪಡೆದುಕೊಂಡು, ಸದರಿ ಭಾರತೀಯ ನಾಗರಿಕನ ಹೆಸರು ಮತ್ತು ವಿಳಾಸವನ್ನು ಭಾರತದಲ್ಲಿ ತನ್ನ ವಿಳಾಸವೆಂದು ವರದಿ ಮಾಡಬಹುದು. ಭಾರತದಲ್ಲಿ ವಿದೇಶೀಯನ ವಿಳಾಸವೆಂದು (4) ನೇ ಉಪ–ನಿಯಮದ ಉಪಬಂಧಗಳಿರುವವರೆಗೆ ಭಾವಿಸತಕ್ಕದ್ದು;

ಮತ್ತೂ ಪರಂತು, ಭಾರತದಲ್ಲಿ ನಿವಾಸ ಹೊಂದಿಲ್ಲದಿರುವ ವಿದೇಶೀಯನ ಸಂದರ್ಭದಲ್ಲಿ, ಯಾವ ಸ್ಥಳದಲ್ಲಿ ಅವನು ಎಲ್ಲಾ ಕಾಲದಲ್ಲಿ ವಾಸಿಸುತ್ತಿದ್ದನೋ ಆ ಜಿಲ್ಲೆಗೆ ಯುಕ್ತ ಸಮಯದೊಳಗೆ ಹಿಂದಿರುಗಲು ಸಂಭವವಿರದಿರುವ ಆಗಾಗ ಪ್ರಯಾಣಿಸುವ ಅನಿವಾರ್ಯತೆಗೆ ಸಂಬಂಧಿಸಿದಂಥ ಉದ್ಯೋಗವಿರುವ ಮತ್ತು ಹಿಂದೆ ಹೇಳಲಾದ ಪರಂತುಕದ ಉಪಬಂಧಗಳು ತನಗೆ ಲಭ್ಯವಾಗಲು ಸಾಧ್ಯವಾಗದಿರುವ ಉದ್ಯೋಗವಿರುವವರು. ಭಾರತದಲ್ಲಿ ಅವನು ತಲುಪಿದ ನಂತರ ಅವನು ಯಾವ ಜಿಲ್ಲೆಯಲ್ಲಿ ಮೊದಲ ನೋಂದಣಿಯನ್ನು ಮಾಡಿಸಿದ್ದನೋ ಆ ಜಿಲ್ಲೆಯ ನೋಂದಣಿ

ಅಧಿಕಾರಿಯ ಕಛೇರಿಯನ್ನು ಭಾರತದಲ್ಲಿನ ಅವನ ವಿಳಾಸವೆಂದು ಭಾವಿಸತಕ್ಕದ್ದು.

4. ಯಾವ ಪ್ರಕರಣಕ್ಕೆ (3) ನೇ ಉಪ–ನಿಯಮದ ಪರಂತುಕವು ಅನ್ವಯವಾಗುತ್ತದೆಯೋ ಆ ಯಾವುದೇ ಪ್ರಕರಣದಲ್ಲಿ ಇದು,–
(ಎ) ವಿದೇಶೀಯನು ತನ್ನ ಪ್ರಸ್ತುತ ವಿಳಾಸದಲ್ಲಿ ಸೂಚಿಸಲಾದ ಭಾರತೀಯ ನಾಗರಿಕನನ್ನು ವಿಳಾಸದಲ್ಲಿ ಇಟ್ಟುಕೊಂಡಿರುವುದು ವಿದೇಶೀಯನ; ಮತ್ತು

(ಬಿ) ಅಧಿನಿಯಮದ ಯಾವುದೇ ಉದ್ದೇಶಗಳಿಗಾಗಿ ಅಥವಾ ಯಾರೇ ನೋಂದಣಿ ಅಧಿಕಾರಿಯು, ದಂಡಾಧಿಕಾರಿಯು ಅಥವಾ ಮುಖ್ಯ ಪೇದೆಯ ದರ್ಜೆಗೆ ಕಡಿಮೆಯಿರದ ಪೊಲೀಸು ಅಧಿಕಾರಿಯು ಕೋರಬಹುದಾದಂಥ ವಿದೇಶೀಯನಿಗೆ ಸಂಬಂಧಪಟ್ಟಂತೆ ಅವನ ಸ್ವಾಧೀನದಲ್ಲಿರುವಂಥ ಎಲ್ಲಾ ಮಾಹಿತಿಯನ್ನು ಒದಗಿಸುವುದು ಭಾರತೀಯ ನಾಗರಿಕನ

– ಕರ್ತವ್ಯವಾಗಿರತಕ್ಕದ್ದು.

5. ಯಾರೇ ನೋಂದಣಾಧಿಕಾರಿ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ನಮೂನೆ–ಎ ಪ್ರತಿಗಳನ್ನು ಪಡೆದುಕೊಳ್ಳಬಹುದು.

ವಿದೇಶೀಯರ ನೋಂದಣಿ ನಿಯಮಗಳು 1992ರ 7ನೇ ನಿಯಮವು, ನೋಂದಣಿಯ ಪ್ರಕ್ರಿಯೆಯ ಬಗ್ಗೆ ತಿಳಿಸುತ್ತದೆ. ಈ ಮೊದಲು ನೀಡಲಾದ ವಿಳಾಸದಲ್ಲಿ ವ್ಯಕ್ತಿಯು ಇರದೆ ಇದ್ದರೂ ಕೂಡ, 8 ವಾರಗಳು ಮತ್ತು ಅದಕ್ಕಿಂತ ಹೆಚ್ಚಿನ ಅವಧಿಗೆ ನಿರಂತರವಾಗಿ ವಾಸವಾಗಿರದಿದ್ದರೆ ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ 11ನೇ ನಿಯಮದ ಪ್ರಕಾರ ವರದಿಯನ್ನು ಮಾಡತಕ್ಕದ್ದು. ವಿಳಾಸದ ಬದಲಾವಣೆಯನ್ನು ಸಹ ತಿಳಿಸತಕ್ಕದ್ದು. 9ನೇ ನಿಯಮವು ಗುರುತಿನ ರುಜುವಾತಿನ ಬಗ್ಗೆ ತಿಳಿಸುತ್ತದೆ

ಮತ್ತು 8ನೇ ನಿಯಮವು ನೋಂದಣಿ ಪ್ರಮಾಣಪತ್ರದ ಸಿಂಧುತ್ವದ ಬಗ್ಗೆ ತಿಳಿಸುತ್ತದೆ. ಇವು ಶಾಸನಾತ್ಮಕ ನಿಯಮಗಳಾಗಿವೆ.

23. ***ಜನರಾಜನ್ @ ಕೃಷ್ಣಮುರಳಿ -ವಿರುದ್ಧ- ತಮಿಳುನಾಡು ರಾಜ್ಯ***[1], ಪ್ರಕರಣದಲ್ಲಿ ಮಾನ್ಯ ಮದ್ರಾಸು ನ್ಯಾಯಾಲಯವು, ವಿದೇಶೀಯರ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿರುವ ವ್ಯಕ್ತಿಗಳಿಗೆ ಜಾಮೀನನ್ನು ನೀಡಿದರೆ, ಅಂಥ ವ್ಯಕ್ತಿಯು, ಸಿಂಧುವಾದ ಪಾಸ್‌ಪೋರ್ಟ್ ಮತ್ತು ವೀಸಾ ಇಲ್ಲದೆ ಒಂದು ದಿನವೂ ಕೂಡ ಭಾರತದಲ್ಲಿ ಉಳಿಯಲು ಸಾಧ್ಯವಿಲ್ಲವೆಂದು ಪುನರುಚ್ಚರಿಸಿದೆ. ಆದುದರಿಂದ, ನಡೆಯುತ್ತಿರುವ ಅಧಿವಿಚಾರಣೆಯು, ಅವನ ವಿರುದ್ಧ ನೋಂದಾಯಿಸಲಾದ ಪ್ರಕರಣದ ಸಂಬಂಧದಲ್ಲಿ ಅಧಿವಿಚಾರಣೆಯ ಫಲಿತಾಂಶಕ್ಕಾಗಿ ಕಾಯಬೇಕು. ಕ್ರಿಮಿನಲ್ ಪ್ರಕರಣ ನಿರ್ಣಯವಾದ ನಂತರವೂ ಸಹ ವೀಸಾ ಮುಕ್ತಾಯವಾದ ಅವಧಿಯನ್ನು ಮೀರಿ ಉಳಿದುಕೊಂಡಿದ್ದಕ್ಕೆ ಅಂಥ ವಿದೇಶೀಯನನ್ನು ಗಡೀಪಾರು ಮಾಡಲು ಪ್ರಾಧಿಕಾರಗಳು ಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧದಲ್ಲಿ ***ಬಿಶ್ರತ್ ಅಲಿ -ವಿರುದ್ಧ- ಭಾರತ ಒಕ್ಕೂಟ***[2], ಪ್ರಕರಣದಲ್ಲಿ ನೀಡಿದ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಇದಕ್ಕೆ ಸಂಬಂಧಪಡುತ್ತದೆ.

24. ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಮಾನ್ಯ ಶ್ರೀ ಕೃಷ್ಣ ದೀಕ್ಷಿತ್‌ರವರು ಮತ್ತು ಅಡಿಷನಲ್ ಅಡ್ವೊಕೇಟ್ ಜನರಲ್‌ರವರಾದ ಮಾನ್ಯ ಶ್ರೀ ಪಿ.ಎಂ. ನವಾಜ್‌ರವರು ಇಬ್ಬರೂ ಪ್ರಸ್ತುತ ಪ್ರಕರಣದಲ್ಲಿ ಜಾಮೀನು ಮಂಜೂರಾದರೆ, ವಿದೇಶೀಯರ ಅಧಿನಿಯಮ, 1946, ಪಾಸ್‌ಪೋರ್ಟ್‌ಗಳ ಅಧಿನಿಯಮ, 1967, ವಿದೇಶೀಯರ ಆದೇಶ 1939 ಮತ್ತು ವಿದೇಶೀಯರ ನೋಂದಣಿ ಅಧಿನಿಯಮ, 1939ರ ಕಟ್ಟುನಿಟ್ಟಾದ ಉಪಬಂಧಗಳನ್ನು ಉಲ್ಲಂಘಿಸಿರುವ ವಿದೇಶೀಯನಾಗಿರುವ ಅರ್ಜಿದಾರನು ಅಕ್ರಮವಾಗಿ ವಾಸಿಸುವುದನ್ನು ಕಾನೂನುಬದ್ಧಗೊಳಿಸಿದಂತೆಯೇ ಆಗುತ್ತದೆಂದು ನಿವೇದಿಸಿದ್ದಾರೆ.

1. [2005] 5 ಸಿಟಿಸಿ 762 (ಮದ್ರಾಸ್)
2. [2013]12 ಎಸ್‌ಸಿಸಿ 315

ಮಾನ್ಯ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಗೂ ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್ ರವರ ನಿವೇದನೆಗಳು ಅತ್ಯಂತ ಪರಿಣಾಮಕಾರಿಯಾಗಿದೆ.

25. ಹಾಗಾಗಿ, ಯಾವುದೇ ಕೋನದಿಂದ ನೋಡಿದರೂ ಪ್ರಸ್ತುತ ಪ್ರಕರಣದ ಸಂಗತಿಗಳನ್ನು ಸದ್ಯದ ಅರ್ಜಿದಾರನಿಗೆ ಜಾಮೀನು ನೀಡುವ ಸಂಬಂಧದಲ್ಲಿ ವಾದವನ್ನು ಸಮರ್ಥಿಸಲಾಗುವುದಿಲ್ಲ. ಭಾರತ ದಂಡ ಸಂಹಿತೆಯ 376ನೇ ಪ್ರಕರಣದ ಅನ್ವಯತೆಯು ಸಂಬಂಧಪಡುವಷ್ಟರ ಮಟ್ಟಿಗೆ, ಪ್ರಕರಣದ ಸಂಗತಿಗಳು ಭಾರತ ದಂಡ ಸಂಹಿತೆಯ 375ನೇ ಪ್ರಕರಣದ ಮೇರೆಗೆ ಉದ್ದೇಶಿಸಲಾದಂತೆ 'ಅತ್ಯಾಚಾರ' ಎಂಬುದರ ವ್ಯಾಪ್ತಿಯೊಳಗೆ ಬರುತ್ತವೆಯೇ ಎಂಬುದನ್ನು ತಿಳಿಸುವ ಆರೋಪಗಳನ್ನು ರೂಪಿಸುವಾಗ ಸಂಬಂಧಪಟ್ಟ ನ್ಯಾಯಾಲಯವು ಯುಕ್ತ ನಿರ್ಣಯವನ್ನು ತೆಗೆದುಕೊಳ್ಳಬೇಕು. ಮೊದಲ ಮಾಹಿತಿದಾರಳು ಮಾಡಿದ ಗಂಭೀರ ಆಪದನೆಯು ವಿವಾಹದ ಭರವಸೆಯನ್ನು ನೀಡಿದ ಮೇಲೆ ಅವನೊಂದಿಗೆ ದೈಹಿಕವಾಗಿ ಸಹಕರಿಸಿದಳೆಂಬುದನ್ನು ಅವಳು ವಾಸ್ತವವಾಗಿ ಮನಗಾಣಿಸಿರುವುದು ತಿಳಿಸಲು ಇಷ್ಟು ಸಾಕು. ಇದನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ.

26. ಸಾಮಾನ್ಯವಾಗಿ, ಜಾಮೀನು ಅರ್ಜಿಯನ್ನು ಪರಿಗಣಿಸುವಾಗ ಕ್ರಿಮಿನಲ್ ನ್ಯಾಯಾಲಯಗಳು, ಅಧಿವಿಚಾರಣಾ ನ್ಯಾಯಾಧಿಕರಣವನ್ನು ಸಂಪರ್ಕಿಸುತ್ತವೆ ಮತ್ತು ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದನೇ ಎಂಬುದನ್ನು ನೋಡುತ್ತವೆ. ಆದರೆ ಭಾರತದಲ್ಲಿ ವಿದೇಶೀಯ ಅವಧಿ ಮೀರಿ ವಾಸಿಸಿರುವ ಸಂದರ್ಭಗಳಲ್ಲಿ, ಅವನನ್ನು ಗಡೀಪಾರು ಮಾಡುವವರೆಗೆ ಅದು ಕಾನೂನುಬಾಹಿರವಾಗಿ ಉಳಿದಂತಾಗುತ್ತದೆ ಮತ್ತು ಅವನು/ಅವಳನ್ನು ಬಿಡುಗಡೆ ಮಾಡಿದರೆ ಅಧಿವಿಚಾರಣೆಯು ಹೆಚ್ಚಿನ ಅವಧಿಯನ್ನು ತೆಗೆದುಕೊಳ್ಳುತ್ತದೆ, ಅಧಿವಿಚಾರಣೆ ತೀರ್ಮಾನವಾಗುವವರೆಗೆ ಭಾರತದಲ್ಲಿ ಉಳಿದುಕೊಳ್ಳಲು ಅವನಿಗೆ ಅವಕಾಶ ನೀಡಲಾಗುತ್ತದೆ ಮತ್ತು ಇದು ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆ.

27. ವಾಸ್ತವವಾಗಿ, ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದ ಉಲ್ಲಂಘನೆಗಾಗಿ ಸಲ್ಲಿಸಿದ ಪ್ರಕರಣವನ್ನು ನಿರ್ವಹಿಸುವ ಸಂಬಂಧಪಟ್ಟ ನ್ಯಾಯಾಧೀಶರು, ಅವಧಿ ಮೀರಿ ವಾಸಿಸುತ್ತಿದ್ದ ವಿದೇಶೀಯನನ್ನು ಗಡೀಪಾರು ಮಾಡಲು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸೂಚಿಸಬಹುದೇ ಎಂಬ ಪ್ರಶ್ನೆಯನ್ನು ***ಇಎಲ್ ಮುಸ್ತಾಫಾ ಇಎಲ್ ಫಾಥಿ –ವಿರುದ್ಧ– ಕರ್ನಾಟಕ ರಾಜ್ಯ***[3], ಪ್ರಕರಣದಲ್ಲಿ ಈ ನ್ಯಾಯಾಲಯವು ಪರಿಗಣಿಸಿದೆ. ಸದರಿ ಪ್ರಕರಣದ ಸಂಗತಿಗಳ ಪ್ರಕಾರ, ಅದರಲ್ಲಿರುವ ಆಪಾದಿತನ ಅಪರಾಧ ನಿರ್ಣಯವಾದ ನಂತರ ಮಾನ್ಯ ಎಂಎಂಟಿಸಿ – ರ ಮಾನ್ಯ ನ್ಯಾಯಾಧೀಶರು ಸಿ.ಸಿ.407/04ರಲ್ಲಿ, ಶಿಕ್ಷೆಯು ಮುಕ್ತಾಯವಾದ ನಂತರ ವಿದೇಶೀಯನನ್ನು ಗಡೀಪಾರು ಮಾಡುವ ಕ್ರಮವನ್ನು ರಾಜ್ಯ ಕೈಗೊಳ್ಳಬೇಕೆಂದು ಸೂಚಿಸಿದ್ದರು. ಈ ನಿರ್ದೇಶನವನ್ನು ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮೂಲಕ ಪ್ರಶ್ನಿಸಲಾಗಿದೆ. ಸದರಿ ವಿಷಯವನ್ನು ನಿರ್ವಹಿಸುವಾಗ, ಈ ನ್ಯಾಯಾಲಯವು, ಶಿಕ್ಷೆಯನ್ನು ಹೇರಿದ ನಂತರ ಆಪಾದಿತನನ್ನು ಗಡೀಪಾರು ಮಾಡಲು ರಾಜ್ಯ ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳು ನಿರ್ದೇಶನ ನೀಡುವುದನ್ನು ಮ್ಯಾಜಿಸ್ಟ್ರೇಟರು ಸಮರ್ಥಿಸಿರುವರೆಂದು ಅಭಿಪ್ರಾಯಪಟ್ಟಿದೆ. ಈ ನ್ಯಾಯಾಲಯದ ಸಂಬಂಧಪಟ್ಟ ನಿರ್ಣಯವು ಪುಟ 4605ರಲ್ಲಿರುವ ಕಂಡಿಕೆ 7 ರಲ್ಲಿ ಕಂಡು ಬರುತ್ತದೆ ಮತ್ತು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

> *"7. ಪ್ರತಿಯೊಂದು ದೇಶವು, ತನ್ನ ಕಾನೂನಿನಲ್ಲಿ, ಅಂಥ ದೇಶದೊಳಗೆ ವಿದೇಶೀಯುರು ಪ್ರವೇಶಿಸುವುದರ ಮೇಲಿನ ನಿರ್ಬಂಧಗಳಿಗೆ ಸಂಬಂಧಪಟ್ಟಂತೆ ಉಪಬಂಧಿಸುತ್ತದೆ ಮತ್ತು ಅನುಮತಿಸಲಾದ ಅವಧಿಗೆ ದೇಶದಲ್ಲಿ ಅವರು ವಾಸಿಸುವುದನ್ನು ನಿಯಮಗಳು ನಿರ್ಬಂದಿಸುತ್ತವೆ. ವಿದೇಶೀಯರಿಗೆ ರೂಪಿಸಲಾದ ಕ್ರಮಗಳು, ವಿದೇಶೀಯರ ಅಧಿನಿಯಮ, 1946 ಮತ್ತು ವಿದೇಶೀಯರ ಆದೇಶ 1948 ರಲ್ಲಿ ಕಂಡುಬರುತ್ತವೆ. ಇತರ ವಿಷಯಗಳ ಮಧ್ಯೆ, ಅನಧಿಕೃತವಾಗಿ ಭಾರತದೊಳಗೆ ಪ್ರವೇಶಿಸುವ ವಿದೇಶೀಯರ ಅಥವಾ*

3. ಐಎಲ್ಆರ್ 2004 ಕೆಎಆರ್ 4603

*ಭಾರತದಲ್ಲಿ ನೆಲೆಸಲು ಅನುಮತಿಯು ಮುಕ್ತಾಯವಾಗಿರುವ ವಿದೇಶೀಯರನ್ನು ಹೊರದೂಡುವುದಕ್ಕೆ ಸಂಬಂಧಿಸಿದ ಬಗ್ಗೆ ಉಪಬಂಧಿಸಲಾಗಿದೆ. ಅಂಥ ವ್ಯಕ್ತಿಗಳನ್ನು, ವರ್ಗಾವಣೆ ನಂತರ, ಅವರು ಮರು ಪ್ರವೇಶಿಸಿದ ಸಂಬಂಧದಲ್ಲಿ ಅವರ ವರ್ಗಾವಣೆ ಮತ್ತು ನಿಷೇಧವನ್ನು ಬಾಕಿಯಿರಿಸಿರುವಂಥ ವ್ಯಕ್ತಿಗಳ ಬಂಧನದ ಬಗ್ಗೆಯೂ ಸಹ ಅವು ಉಪಬಂಧಿಸುತ್ತವೆ. ಭಾರತದಲ್ಲಿ ವಿದೇಶೀಯನ ಕಾನೂನು ಬಾಹಿರ ಪ್ರವೇಶ ಅಥವಾ ಅವಧಿ ಮೀರಿದ ವಾಸದ ಸಂಬಂಧ ದೋಷಿಯೆಂದು ನಿರ್ಣಯಿಸುವ ನ್ಯಾಯಾಲಯವು, ಭಾರತದಲ್ಲಿ ವಾಸಿಸಲು ಅಗತ್ಯ ಅನುಮತಿಯನ್ನು ಸಕ್ಷಮ ಪ್ರಾಧಿಕಾರವು ನೀಡಿದ ಹೊರತು, ಅಂಥ ವಿದೇಶೀಯನನ್ನು ಗಡೀಪಾರು ಮಾಡಲು ಅಗತ್ಯ ಕ್ರಮಗಳನ್ನು ನಿರ್ದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು. ಆದುದರಿಂದ, ವಿದೇಶೀಯರ ಅಧಿನಿಯಮದ 14(ಸಿ) ಪ್ರಕರಣದ ಮೇರೆಗೆ ಅಪರಾಧವೆಸಗಿದ ಸಂಬಂಧ ವಿದೇಶೀಯನನ್ನು ಅಪರಾಧದ ದೋಷಿಯೆಂದು ನಿರ್ಣಯಿಸುವ ನ್ಯಾಯಾಲಯವು, ಭಾರತದಿಂದ ಅಂಥ ವ್ಯಕ್ತಿಯನ್ನು ಗಡೀಪಾರು ಮಾಡುವ ಅಗತ್ಯ ಕ್ರಮಗಳನ್ನು ನಿರ್ದೇಶಿಸುವಲ್ಲಿ ಕಾನೂನು ಬಾಹಿರತೆ ಯಾಗಿದೆಯೆಂದು ಹೇಳಲಾಗುವುದಿಲ್ಲ.*

28. ಸಿಂಧುವಾದ ವೀಸಾ ಇಲ್ಲದೆ ಮತ್ತು ವೀಸಾದ ವಿಸ್ತರಣೆಯನ್ನು ಮಾಡಿಕೊಳ್ಳಲು ಯಾವುದೇ ಕ್ರಮಕೈಗೊಳ್ಳದೆ 2 ವರ್ಷ 9 ತಿಂಗಳುಗಳಿಗಿಂತ ಹೆಚ್ಚು ಕಾಲ ಭಾರತದಲ್ಲಿ ಅವಧಿ ಮೀರಿ ವಾಸವಾಗಿರುವ ಪ್ರಸ್ತುತ ಅರ್ಜಿದಾರನ ಹಿನ್ನೆಲೆಯಲ್ಲಿ, ಬೆಳೆದಿರುವ ಹುಡುಗಿಯೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿರುವುದನ್ನು ಒಳಗೊಂಡಂತೆ ಅವಳನ್ನು ಮದುವೆಯಾಗಲು ಭರವಸೆ ನೀಡಿ ತದನಂತರ ತಾನು ಕೊಟ್ಟ ವಾಗ್ದಾನದಿಂದ ಹಿಂದೆ ಸರಿದಿರುವುದರ ಹಿನ್ನೆಲೆಯಲ್ಲಿ ಅವನಿಗೆ ಜಾಮೀನನ್ನು ನೀಡಲು ಹಕ್ಕುಳ್ಳವನಾಗಿಲ್ಲ. ಇದಲ್ಲದೆ, ಅರ್ಜಿದಾರನು, ತನು ನಿರ್ದಿಷ್ಟ ವಿಳಾಸದಲ್ಲಿ ವಾಸಿಸುತ್ತಿರುವುದನ್ನು ತೋರಿಸಲು ಯಾವುದೇ

ಮಾಹಿತಿಯನ್ನು ಇಟ್ಟಿರುವುದಿಲ್ಲ ಮತ್ತು ಇದನ್ನು ಅಧಿಕಾರ ವ್ಯಾಪ್ತಿಯುಳ್ಳ ಪೋಲೀಸು ಮತ್ತು ಎಫ್‌ಆರ್‌ಆರ್‌ಓ ರವರಿಗೆ ವರದಿ ಮಾಡಲಾಗಿದೆ.

29. **ವಿವಾದಾಂಶ ಸಂಖ್ಯೆ (2)**: ವಿಶೇಷ ಅಭಿಯೋಜಕರಾದ ಶ್ರೀ ಪಿ.ಎಂ. ನವಾಝುರವರು 2013, 2014, 2015 ಮತ್ತು 7.2.2016ರ ವರೆಗಿನ ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿರುವ ವಿದೇಶೀಯರ ವಿರುದ್ಧ ನೋಂದಾಯಿತವಾದ ಪ್ರಕರಣಗಳ ಸಂಖ್ಯೆಗಳಿರುವ ಪಟ್ಟಿಯನ್ನು ಸಲ್ಲಿಸಿದ್ದಾರೆ. ಒಟ್ಟಾರೆ ಭಾರತ ದಂಡ ಸಂಹಿತೆಯ ವಿವಿಧ ಉಪಬಂಧಗಳು ಮತ್ತು ವಿದೇಶೀಯರ ಅಧಿನಿಯಮ, ಎನ್‌ಡಿಪಿಎಸ್ ಅಧಿನಿಯಮ ಮೊದಲಾದವುಗಳ ವಿಶೇಷ ಪರಿನಿಯಮಗಳ ಮೇರೆಗೆ ಬೇರೆ ಬೇರೆ ವಿದೇಶೀಯರ ವಿರುದ್ಧ 330 ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಲಾಗಿದೆ. ವರ್ಷವಾರು ಪ್ರಕರಣಗಳು ಈ ಮುಂದಿನಂತಿವೆ:

| | | |
|---|---|---|
| 2013 | : | 131 |
| 2014 | : | 114 |
| 2015 | : | 78 |
| 2016 | : | 07 |

ಇವುಗಳ ಪೈಕಿ 61 ಪ್ರಕರಣಗಳು ನೈಜೀರಿಯಾ ರಾಷ್ಟ್ರಗಳಿಗೆ, ಸಂಬಂಧಪಟ್ಟಿವೆ 31 ಪ್ರಕರಣಗಳು ಬಾಂಗ್ಲಾದೇಶಕ್ಕೆ 36 ಪ್ರಕರಣಗಳ ಐವರಿ ಕೋಸ್ಟ್ ರಾಷ್ಟ್ರಗಳಿಗೆ ಸಂಬಂಧಪಟ್ಟಿವೆ. ಉಗಾಂಡ ರಾಷ್ಟ್ರಗಳ ಸಂಬಂಧದಲ್ಲಿ 12, ನೇಪಾಳ ರಾಷ್ಟ್ರದ ಸಂಬಂಧದಲ್ಲಿ 12, ಕಾಂಗೋ ದೇಶಗಳ ಸಂಬಂಧದಲ್ಲಿ 12, ತಾಂಜೇನಿಯಾ ಸಂಬಂಧದಲ್ಲಿ 5 ಪ್ರಕರಣಗಳು ಮತ್ತು ಇರಾನಿಯನ್ನರ ಸಂಬಂಧಾದಲ್ಲಿ 33 ಪ್ರಕರಣಗಳಿವೆ.

30. ಬೆಂಗಳೂರು ನಗರದಲ್ಲಿರುವ ವಿದೇಶೀಯರ ವಿರುದ್ಧ ದಾಖಲಾದ ಪ್ರಕರಣಗಳ ಪಟ್ಟಿಯನ್ನು ಪರಿಶೀಲಿಸಿದ ಮೇಲೆ ಎನ್‌ಡಿಪಿಎಸ್ ಅಧಿನಿಯಮ, ಭಾರತ ದಂಡ ಸಂಹಿತೆ ಮೊದಲಾದವುಗಳನ್ನು ಒಳಗೊಂಡಂತೆ ಕೆಲವು ಭಾರತದ ದಂಡನೀಯ

ಪರಿನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ, ವಿದೇಶೀಯರನ್ನು ದಾಖಲು ಮಾಡಲಾಗಿದೆ, ಭಾರತ ದಂಡ ಸಂಹಿತೆಯ 497,420,399 ಮತ್ತು 402ನೇ ಪ್ರಕರಣಗಳು ಮತ್ತು ಎನ್‌ಡಿಪಿಎಸ್ ಅಧಿನಿಯಮದ 20ನೇ ಪ್ರಕರಣ ಮಾಹಿತಿ ಮತ್ತು ತಂತ್ರಜ್ಞಾನ ಅಧಿನಿಯಮ ಮತ್ತು ಅನೈತಿಕ ವ್ಯವಹಾರ ಪ್ರತಿಬಂಧಕ ಅಧಿನಿಯಮ, ಕರ್ನಾಟಕ ಅಬಕಾರಿ ಅಧಿನಿಯಮ, ಮೊದಲಾದವುಗಳ ಮೇರೆಗಿನ ಇತರ ಅಪರಾಧಗಳಿಗಾಗಿ ತನಿಖೆಯನ್ನು ಕೈಗೊಂಡಾಗ ಅವಧಿ ಮೀರಿ ವಾಸ ಮಾಡಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ.

31. ಎಫ್‌ಆರ್‌ಆರ್‌ಓ ಶ್ರೀ ಗಣೇಶ್‌ರವರಿಂದ ಸೂಚನೆಗಳನ್ನು ಸ್ವೀಕರಿಸಿದ ನಂತರ ಮಾನ್ಯ ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಶ್ರೀ ಕೃಷ್ಣ ದೀಕ್ಷಿತ್ ರವರು, ದಿನಾಂಕ 31.12.2015ರಲ್ಲಿದ್ದಂತೆ ಕರ್ನಾಟಕ ರಾಜ್ಯದಲ್ಲಿ ಸುಮಾರು 23.708 ವಿದೇಶೀಯರು ವಾಸಿಸುತ್ತಿದ್ದರೆಂದು ಮತ್ತು ಅವರ ಪೈಕಿ 1,165 ಜನರು, ಬೆಂಗಳೂರಿನಲ್ಲೆ ಇವರಿಗೆ ಹೊರಡಿಸಿದ ವೀಸಾದಲ್ಲಿ ಸೂಚಿಸಿದ ಅವಧಿಯನ್ನು ಮೀರಿ ವಾಸಿಸುತ್ತಿರುವರೆಂದು ಮತ್ತು 68 ದೇಶಗಳಿಗೆ ಸೇರಿರುವರೆಂದು ವರದಿ ಮಾಡಲಾಗಿದೆ. 1.1.2016ರಂದು ಇದ್ದಂತೆ ದೇಶವಾರು 68 ದೇಶಗಳ ಅವಧಿಮೀರಿ ವಾಸಿಸುತ್ತಿರುವ ವಿದೇಶೀಯರನ್ನು ಒಲಗೊಂಡಿರುವ ಪಟ್ಟಿಯನ್ನೂ ಸಹ ಇವರಿಗೆ ಸಲ್ಲಿಸಲಾಗಿದೆ. ಅವರಲ್ಲಿ 33 ಜನರು ಆಫ್‌ಘಾನೀಸ್ತಾನ ದೇಶದವರು, ಬಾಂಗ್ಲಾದೇಶದಿಂದ 36 ಜನರು, ಕಾಂಗೋದಿಂದ 100 ಜನರು ಐವರಿ ಕೋಸ್ಟ್‌ನಿಂದ 100 ಜನರು, ಸೂಡಾನ್‌ನಿಂದ 212 ಜನರು ತಾಂಜೇನಿಯಾದಿಂದ 13, ಉಗಾಂಡದಿಂದ 39, ಯೆಮೆನ್‌ನಿಂದ 99 ಇರಾಕ್‌ನಿಂದ 54, ಇರಾನ್‌ನಿಂದ 55, ದಕ್ಷಿಣ ಸೂಡಾನ್‌ನಿಂದ 26, ರವಾಂಡ ಗಣರಾಜ್ಯದಿಂದ 22 ಮತ್ತು ಮೇಲ್‌ನಿಂದ 12 ಜನರು ಇದ್ದಾರೆ.

32. ಅಡಿಷನಲ್ ಸಾಲಿಸಿಟರ್ ಜನರಲ್‌ರವರು ಸಲ್ಲಿಸಿದ ಪಟ್ಟಿಯನ್ನು ಪರಿಶೀಲಿಸಿದ ನಂತರ, ಎಫ್‌ಆರ್‌ಆರ್‌ಓ ಮತ್ತು ಪೊಲೀಸಿನವರ ನಡುವೆ ಸರಿಯಾದ ಮತ್ತು ಪರಿಣಾಮಕಾರಿಯಾದ ಸಹಕಾರಿವಿರಲಿಲ್ಲವೆಂಬುದು ತಿಳಿದುಬರುತ್ತದೆ. ಅಪಾರ ಪ್ರಮಾಣದಲ್ಲಿ ವಿದೇಶೀಯರು ಇಲ್ಲಿ ವಾಸಿಸುತ್ತಿದ್ದು, ಅವಧಿ ಮೀರಿ ವಾಸಿಸಿರುವ ಅವಧಿಯ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ, ಇಲ್ಲಿನ

ಅರ್ಜಿದಾರನು 2 ವರ್ಷ 9 ತಿಂಗಳುಗಳಿಗಿಂತ ಹೆಚ್ಚಿನ ಅವಧಿಯಲ್ಲಿ ಅವಧಿ ಮೀರಿ ವಾಸಿಸುತ್ತಿದ್ದಾನೆ. ಈ ಸಂಬಂಧದಲ್ಲಿ, ಎಫ್‌ಆರ್‌ಆರ್‌ಓ ಮತ್ತು ಸ್ಥಳೀಯ ಪೊಲೀಸರ ನಡುವಿನ ಪರಿಣಾಮಕಾರಿ ಸಮನ್ವಯವು ಅತ್ಯಗತ್ಯವಾಗಿದೆ. ಪೊಲೀಸು ಇಲಾಖೆ ಮತ್ತು ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯದ ಹಿರಿಯ ಪ್ರತಿನಿಧಿಗಳು ಮಾಹಿತಿ ವಿನಿಮಯ ಮಾಡಿಕೊಳ್ಳಲು ಮತ್ತು ಅನುಚಿತ ವಿಳಂಬವಿಲ್ಲದೆ ಯುಕ್ತ ಕಾನೂನು ಕ್ರಮ ಕೈಗೊಳ್ಳಲು ನಿಯತ ಸಭೆ ನಡೆಸುವುದನ್ನು ಅಪೇಕ್ಷಿಸುತ್ತದೆ.

33. ಶ್ರೀ ಗಣೇಶ್ ರವರಿಂದ ಸೂಚನೆಗಳನ್ನು ಸ್ವೀಕರಿಸಿದ ಮೇಲೆ ಬೆಂಗಳೂರು ನಗರದಲ್ಲಿ ಸ್ಥಾನ ಬದ್ಧತೆ ಕೇಂದ್ರವನ್ನು ಸ್ಥಾಪಿಸಿಲ್ಲವೆಂಬುದನ್ನು ಶ್ರೀಕೃಷ್ಣ ದೀಕ್ಷಿತ್‌ರವರು ನಿವೇದಿಸಿದ್ದಾರೆ. ಕರ್ನಾಟಕ ಸರ್ಕಾರದ ಒಳಾಡಳಿತ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ದಿನಾಂಕ 7.8.2014ರಂದು ಮಹಾ ನಿರ್ದೇಶಕರು ಮತ್ತು ಪೊಲೀಸು ಮಹಾ ನಿರ್ದೇಶಕರಿಗೆ ಬರೆದ ಪತ್ರವು, ಬೆಂಗಳೂರಿನಲ್ಲಿ ವಿದೇಶೀಯರ ಸ್ಥಾನಬದ್ಧತೆ ಕೇಂದ್ರವನ್ನು ಸ್ಥಾಪಿಸಬೇಕೆಂದು ಮತ್ತು ಇದು ವಿದೇಶೀಯರ ಗಡೀಪಾರಾಗುವ ಮೊದಲು ಅವಧಿ ಮೀರಿ ವಾಸಿಸುತ್ತಿರುವ ವಿದೇಶೀಯರನ್ನು ಸ್ಥಾನಬದ್ಧತೆಯಲ್ಲಿಡಲು ಪ್ರಾಧಿಕಾರಗಳಿಗೆ ಸಹಾಯಕವಾಗುತ್ತದೆ ಎಂಬುದರ ಸಂಬಂಧ ದಿನಾಂಕ 8.8.2014ರಂದು ನಡೆದಿರುವುದನ್ನು ಬಹಿರಂಗಪಡಿಸುತ್ತದೆ.

ಬೆಂಗಳೂರಿನ ಎಫ್‌ಆರ್‌ಆರ್‌ಓ ರವರು ದಿನಾಂಕ 17.7.2014ರಂದು ಪೊಲೀಸು ಮಹಾ ನಿರ್ದೇಶಕರಿಗೆ ಬರೆದ ಪತ್ರದಲ್ಲಿ, ಆದಷ್ಟು ಬೇಗ ಬೆಂಗಳೂರಿನಲ್ಲಿ ವಿದೇಶೀಯರ ಸ್ಥಾನಬದ್ಧತೆ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗುತಯ್ತದೆಯೆಂದು ಬರೆದಿರುವುದು ಕಂಡುಬರುತ್ತದೆ. ಸಭೆಯು, ದಿನಾಂಕ 21.8.2012ರಂದು ಅಂಥ ಕೇಂದ್ರವನ್ನು ಸ್ಥಾಪಿಸಬೇಕೆಂಬ ವಿಷಯವನ್ನು ಪರಿಗಣಿಸಲು ಸಭೆಯು ನಡೆದಿದೆ. ಈ ನ್ಯಾಯಾಲಯವು, ಅನುಚಿತ ವಿಳಂಬ ಮಾಡದೆ ಅಂಥ ಕೇಂದ್ರವನ್ನು ಸ್ಥಾಪಿಸಲು ಎಲ್ಲಾ ಕ್ರಮಗಳನ್ನು ಕೂಡಲೇ ಕೈಗೊಳ್ಳುತ್ತವೆಯೆಂಬ ಭರವಸೆಯನ್ನು ಹೊಂದಿದೆ.

34. ಒಳಾಡಳಿತ ಇಲಾಖೆಯ ಮುಖ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ 21.8.2012ರಂದು ನಡೆದ ಸಭೆಯಲ್ಲಿ, ಕರ್ನಾಟಕದಲ್ಲಿರುವ ಬೇರೆ ಬೇರೆ ಶೈಕ್ಷಣಿಕ ಸಂಸ್ಥೆಗಳಿಗೆ ಸೂಕ್ತ ವಿಧಾನವಿಲ್ಲದೆ ಪ್ರವೇಶಾತಿ ಪಡೆದುಕೊಳ್ಳುವ ವಿದೇಶೀಯರಿಗೆ ಸಂಬಂಧಿಸಿದ ಅಂಶವನ್ನೂ ಸಹ ಚರ್ಚಿಸಲಾಗಿತ್ತು. ವಿದೇಶೀ ರಾಷ್ಟ್ರೀಯರಿಗೆ ಪ್ರವೇಶಾತಿ ನೀಡುವ ಸಂಸ್ಥೆಗಳು ಅಂಥ ವಿದೇಶದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಮತ್ತು ಪ್ರಮಾಣಪತ್ರಗಳನ್ನು ನೀಡಲು ನಿಜವಾಗಿ ಮಾನ್ಯತೆ ಪಡೆದ ಸಂಸ್ಥೆಗಳಾಗಿವೆಯೇ ಎಂಬುದರ ಬಗ್ಗೆ ಸದರಿ ಸಭೆಯಲ್ಲಿ ಸಂಶಯ ಉಂಟಾಗಿತ್ತು. ವಾಸ್ತವವಾಗಿ, ಅಂಥ ಶೈಕ್ಷಣಿಕ ಸಂಸ್ಥೆಗಳ ಪಟ್ಟಿಯನ್ನು ಒದಗಿಸಲು, ಹಾಗೆಯೇ ಅಂಥ ಸಂಸ್ಥೆಗಳ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ಕೈಗೊಳ್ಳಲು ಪ್ರಧಾನ ಕಾರ್ಯದರ್ಶಿಯವರು ಎಫ್ಆರ್ಆರ್ಓ ರವರನ್ನು ಕೋರಿದ್ದರು.

35. 21.8.2014ರಂದು ನಡೆದ ಸಭೆಯಲ್ಲಿ ಸರಿಯಾಗಿ ಸೂಚಿಸಲಾದಂತೆ, ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲು ಮತ್ತು ಪ್ರಾಮಾಣಿಕ (ಸಾಚಾ) ವ್ಯಾಸಂಗ ಪ್ರಮಾಣಪತ್ರಗಳನ್ನು ನೀಡಲು ಕೆಲವು ಶೈಕ್ಷಣಿಕ ಸಂಸ್ಥೆಗಳ ಸಕ್ಷಮತೆಯ ಸಂಬಂಧದಲ್ಲಿ ಕೂಲಂಕಷ ಪರಿಶೀಲನೆಯನ್ನು ಮಾಡಬೇಕಾಗುತ್ತದೆ. ವಿದೇಶೀ ವಿದ್ಯಾರ್ಥಿಗಳ ಪ್ರವೇಶಾತಿಗೆ ಕೆಲವು ಸಂಸ್ಥೆಗಳನ್ನು ಅಧಿಕೃತಗೊಳಿಸದಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಹೇಗೆ ಅಂಥ ಸಂಸ್ಥೆಗಳಿಗೆ ವಿದೇಶಿ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಬೇಕೆಂಬುದನ್ನು ಮತ್ತು ಅಂಥ ಪ್ರವೇಶಾತಿಯಲ್ಲಿ ಯಾವುದಾದರೂ ಗೊಂದಲಗಳಿವೆಯೇ ಎಂಬುದನ್ನು ಗುರುತಿಸುವ ಬಗ್ಗೆ ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ತಮ್ಮ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವಂಥ ಅಭ್ಯರ್ಥಿಗಳು ತಮ್ಮ ಗಮನಕ್ಕೇನಾದರೂ ಬಂದರೆ, ವಿದೇಶಿಯರನ್ನು ಪ್ರವೇಶಾತಿ ಮಾಡಿಕೊಂಡು ಸಾಚಾ ಪ್ರಮಾಣಪತ್ರಗಳನ್ನು ನೀಡುವ ಅಧಿಕೃತ ಸಂಸ್ಥೆಗಳೂ ಸಹ ಎಫ್ಆರ್ಆರ್ಓ ಹಾಗೂ ಪೊಲೀಸಿನವರಿಗೆ ಮಾಹಿತಿ ನೀಡಬೇಕೆಂದು ನಿರೀಕ್ಷಿಸಲಾಗಿದೆ.

36. ವಿದ್ಯಾರ್ಥಿಯು, ಬೆಂಗಳೂರು ಅಥವಾ ಕರ್ನಾಟಕದಲ್ಲಿರುವ ಯಾವುದೇ ಭಾಗಕ್ಕೆ ವಿದ್ಯಾರ್ಥಿ ವೀಸಾದ ಮೇಲೆ ಬಂದಿದ್ದರೆ, ವೀಸಾದಲ್ಲಿ ಸೂಚಿಸಲಾದ

ಅವಧಿಯೊಳಗೆ ಅವನ/ಅವಳ ದೇಶಕ್ಕೆ ಹಿಂದಿರುಗಬೇಕಾಗುತ್ತದೆ. ಯಾವುದೇ ಗಮನ ಸೆಳೆಯುವ ಉದ್ದೇಶಗಳಿಗಾಗಿ ನಿಗದಿಪಡಿಸಲಾದ ಸದರಿ ಅವಧಿಯೊಳಗೆ ಯಾವುದೇ ಕಾರಣಕ್ಕಾಗಿ ಹಿಂದಿರುಗಲು ಸಾಧ್ಯವಾಗದಿದ್ದರೆ ವೀಸಾ ಅವಧಿಯು ಮುಕ್ತಾಯವಾಗುವ ಮೊದಲು ಸಹ ವಿಸ್ತೃತ ವೀಸಾವನ್ನು ಪಡೆದುಕೊಳ್ಳಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗೆ ಜುಲೈ 2016ರ ವರೆಗೆ ಭಾರತದಲ್ಲಿ ವ್ಯಾಸಂಗ ಮಾಡಲು ವಿದೇಶೀಯನನ್ನು ಅನುಮತಿಸಲಾಗಿದೆಯೆಂದು ನಾವು ಭಾವಿಸೋಣ, ಆಗ ಸದರಿ ಅವಧಿಯೊಳಗೆ ಪರೀಕ್ಷೆಯು ಮುಕ್ತಾಯಗೊಳ್ಳುತ್ತದೆ. ಯಾವುದೇ ಕಾರಣಕ್ಕಾಗಿ ಪರೀಕ್ಷೆಗಳನ್ನು ಮುಂದೂಡಿದರೆ, ಸಂಬಂಧಪಟ್ಟ ವಿದೇಶಿ ವಿದ್ಯಾರ್ಥಿಯು ವೀಸಾವನ್ನು ವಿಸ್ತರಿಸಲು ಸಂಬಂಧಪಟ್ಟ ಮನವಿ ಮಾಡಬೇಕಾಗುತ್ತದೆ ಮತ್ತು ಸಂಬಂಧಪಟ್ಟವರು ವಿಳಂಬ ಆಗದ ಹಾಗೆ ಆದಷ್ಟು ಬೇಗನೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ, ಇದು ವೀಸಾ ಅವಧಿಯನ್ನು ಮೀರಿ ವಾಸಿಸುತ್ತಿರುವ ಸ್ಪಷ್ಟ ಪ್ರಕರಣವಾಗುತ್ತದೆ, ಹೀಗೆ ಇದು ಸಂಬಂಧಪಟ್ಟ ವಿದೇಶೀಯರ ಅಧಿನಿಯಮದ ಉಲ್ಲಂಘನೆಗೆ ಸಮನಾಗುತ್ತದೆ ಮತ್ತು ಸದರಿ ಅಧಿನಿಯಮದ 14ನೇ ಪ್ರಕರಣದ ದಂಡನೀಯ ಉಪಬಂಧಗಳು ಅನ್ವಯವಾಗುತ್ತವೆ.

37. ಸಾದೃಶವಾಗಿ, ರೀತಿಯು ವೈದ್ಯಕೀಯ ಚಿಕಿತ್ಸೆಗಾಗಿ ಭಾರತಕ್ಕೆ ಬಂದರೆ, ಏಪ್ರಿಲ್ 2016ರೊಳಗೆ ಹಿಂದಕ್ಕೆ ಹೋಗಬೇಕೆಂದು ನಿರೀಕ್ಷಿಸಲಾಗುತ್ತದೆ ಮತ್ತು ವೈದ್ಯಕೀಯ ಪರಿಚಾರಕ ವೀಸಾವನ್ನು ಸಹ ನೀಡಿದ್ದು, ಇಬ್ಬರೂ ತಮ್ಮ ತಮ್ಮ ಸಂಬಂಧಪಟ್ಟ ದೇಶಕ್ಕೆ ಹೋಗಬೇಕು. ಯಾವುದೇ ಕಾರಣಕ್ಕಾಗಿ, ವೈದ್ಯಕೀಯ ಚಿಕಿತ್ಸೆಯನ್ನು ತಮ್ಮ ನಿಯಂತ್ರಣ ಮೀರಿ ಯಾವುದೇ ಅವಧಿಗೆ ವಿಸ್ತರಿಸಬೇಕಾಗಿದ್ದರೆ, ಸಕಾಲದಲ್ಲಿ ವೀಸಾವನ್ನು ವಿಸ್ತರಿಸಿಕೊಳ್ಳಬೇಕು. ಯಾವ ವ್ಯಕ್ತಿಗೆ ಅವನು ಪರಿಚಾರಕನಾಗಿದ್ದನೋ ಆ ವ್ಯಕ್ತಿಯು ಅವನ/ಅವಳ ದೇಶಕ್ಕೆ ನಿಜವಾಗಿ ಹಿಂದಕ್ಕೆ ಹೋಗಿದ್ದಾನೆಯೇ ಎಂಬ ಬಗ್ಗೆ ಅಡ್ಡ ತನಿಖೆಯನ್ನು ಸಹ ಮಾಡಬೇಕು. ಸ್ಪಷ್ಟಪಡಿಸುವ ಉದ್ದೇಶಕ್ಕಾಗಿ ಇವೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಸೂಚಿಸಲಾಗಿದೆ. ಪ್ರಸ್ತುತ ಪ್ರಕರಣದಲ್ಲಿರುವಂತೆ, ವೈದ್ಯಕೀಯ ಪರಿಚಾರಕನು, ಏಪ್ರಿಲ್ 2013ರ

ಕೊನೆಯಲ್ಲಿ ತನ್ನ ವೀಸಾ ಮುಕ್ತಾಯಗೊಂಡ ಮೇಲೆ ಬೆಂಗಳೂರಿನಲ್ಲಿ ಹೇಗೆ ಅವಧಿ ಮೀರಿ ವಾಸಿಸಿರುವನು ಎಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

38. ಈಗಾಗಲೇ ತಿಳಿಸಲಾದಂತೆ, ವಿದೇಶೀಯರ ಅಧಿನಿಯಮ, 1946 ಕೇಂದ್ರದ ಕಾನೂನಾಗಿದ್ದು, ವಿದೇಶೀಯರ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಧಿಕಾರಗಳನ್ನು ಪ್ರದಾನ ಮಾಡುತ್ತದೆ. ಈ ಅಧಿನಿಯಮದ ಮೇರೆಗೆ ಶಾಸನಬದ್ಧ ನಿಯಮಗಳನ್ನೂ ಸಹ ರೂಪಿಸಲಾಗಿದೆ. ವಿದೇಶೀಯರ ಆದೇಶ, 1948, ವಿದೇಶೀಯರ ಅಧಿನಿಯಮ, 1946ರ 3ನೇ ಪ್ರಕರಣದ ಮೇರೆಗೆ ಮಾಡಲಾದ ಅಧೀನ ಶಾಸನವಾಗಿದೆ. ವಿದೇಶೀಯರ ಆದೇಶ 1948ರ 7ನೇ ಆದೇಶದ ಯಾವುದೇ ಉಲ್ಲಂಘನೆಯು ದಂಡನೀಯವಾದ ಕ್ರಮವನ್ನು ಉಪಬಂಧಿಸುತ್ತವೆ. ವಾಸ್ತವವಾಗಿ, 11ನೇ ಆದೇಶವು, ನಿವಾಸದ ಸ್ಥಳ, ಯಾರೇ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗಗಳೊಂದಿಗೆ ಇರುವ ಸಂಘಟನೆ, ವಿದೇಶೀಯನು ಸಂಘದ ನಿಯಮಾವಳಿ ಹೊಂದಿರುವುದಕ್ಕೆ ಸಂಬಂಧಪಟ್ಟ ಷರತ್ತುಗಳನ್ನು ವಿಧಿಸುವ ಸಿವಿಲ್ ಪ್ರಾಧಿಕಾರವನ್ನು ಸಮರ್ಥಿಸುತ್ತದೆ. 10ನೇ ಆದೇಶವು, ಭಾರದಲ್ಲಿರುವ ವಿದೇಶೀಯರ ಉದ್ಯೋಗಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ರೂಪಿಸಿದೆ. ವಿದೇಶೀ (ಸ್ಥಾನಬದ್ಧತೆ) ಆದೇಶ, 1952, ಸಂಶಯಾಸ್ಪದ ವಿದೇಶೀಯರನ್ನು ಬಂಧಿಸುವುದನ್ನು ಮತ್ತು ಸ್ಥಾನಬದ್ಧತೆಯಲ್ಲಿಡುವುದನ್ನು ಉಪಬಂಧಿಸುತ್ತದೆ.

39. ವಾಸ್ತವವಾಗಿ, ವಿದೇಶೀಯರ ಆದೇಶ, 2001ರ (ಪೋಲೀಸರಿಗೆ ವರದಿ) 2ನೇ ಆದೇಶವು ಸಿಂಧುವಾದ ದಸ್ತಾವೇಜುಗಳು ಇಲ್ಲದೆ, ಒಬ್ಬ ವಿದೇಶೀಯನು ಭಾರತದೊಳಕ್ಕೆ ಪ್ರವೇಶಿಸಿರುವನೆಂದು ಅಥವಾ ಉಳಿದುಕೊಳ್ಳಲು ಅಧಿಕೃತಗೊಳಿಸಿದ ಅವಧಿಯನ್ನು ಮೀರಿ ದೇಶದಲ್ಲಿ ವಾಸವಾಗಿರುವನೆಂದು ನಂಬಲು ಕಾರಣವಾಗಿರುವ ಯಾರೇ ವ್ಯಕ್ತಿಯು, ಯಾವುದೇ ಸ್ವರೂಪದ ಉದ್ದೇಶಕ್ಕಾಗಿ, ತಾನು ಸ್ವಾಧೀನಪಡಿಸಿಕೊಂಡು, ಮಾಲೀಕನಾದ ಅಥವಾ ನಿಯಂತ್ರಿಸಲಾದ ಆವರಣಗಳಲ್ಲಿ ಅಂಥ ವ್ಯಕ್ತಿಗೆ ಸ್ಥಳಾವಕಾಶ ಒದಗಿಸಿದ್ದಲ್ಲಿ, ಅಂಥ ವಿದೇಶೀಯನು ಇರುವ ಕುರಿತು 24 ಗಂಟೆಗಳೊಳಗೆ ಹತ್ತಿರದ ಪೋಲೀಸು ಠಾಣೆಗೆ ತಿಳಿಸುವುದು ಅಂಥ ವ್ಯಕ್ತಿಯ ಕರ್ತವ್ಯವಾಗಿರತಕ್ಕದ್ದು ಎಂಬುದನ್ನು ಕಡ್ಡಾಯಗೊಳಿಸುತ್ತದೆ.

40. ವಿದೇಶೀಯರ ನೋಂದಣಿ ಅಧಿನಿಯಮದ 5ನೇ ಪ್ರಕರಣವು, ಸದರಿ ಅಧಿನಿಯಮದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿನ ದಂಡಗಳ ಕುರಿತು ಉಪಬಂಧಿಸುತ್ತದೆ. ವಿದೇಶೀಯರ ನೋಂದಣಿ ನಿಯಮಗಳು, 1992, ಭಾರತ ತಲುಪಿದ ಸಮಯದಲ್ಲಿ ವರದಿ ಮಾಡಿಕೊಳ್ಳುವ ಸಂಬಂಧದಲ್ಲಿ ಅವರ ವಿಳಾಸ, ನೋಂದಣಿಯ ಪ್ರಕ್ರಿಯೆ, ನೋಂದಣಿಯ ಪ್ರಮಾಣಪತ್ರದ ಸಿಂಧುತ್ವದ ಅವಧಿ, ಗುರುತಿನ ರುಜುವಾತನ್ನು ಹಾಜರುಪಡಿಸುವಿಕೆ, ವಿಳಾಸ ಬದಲಾಯಿಸಿರುವುದರ ವರದಿ, ನೋಂದಣಿಯಾದ ವಿಳಾಸದ ಬದಲಾವಣೆ, ನಿರ್ಗಮಿಸುವ ಕುರಿತು ಪ್ರಮಾಣಪತ್ರಗಳ ಸಲ್ಲಿಕೆ, ಮುಂತಾದವುಗಳ ಸಂಬಂಧದಲ್ಲಿ ಭಾರತದಲ್ಲಿ ನೆಲೆಸಿರುವ ವಿದೇಶೀಯರ ಮೇಲಿರುವ ಕೆಲವು ಹೊಣೆಗಾರಿಕೆಗಳನ್ನು ಗೊತ್ತುಪಡಿಸುತ್ತದೆ. ಹಲವಾರು ಆದೇಶಗಳು ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ನ್ಯಾಯಾಲಯವು ವಿದೇಶೀಯರು ದೀರ್ಘಕಾಲ ಅವಧಿ ಮೀರಿ ವಾಸಿಸಿರುವ ಹಲವಾರು ಪ್ರಕರಣಗಳನ್ನು ತನಿಖೆ ಮಾಡದೆ ಹಾಗೆ ಉಳಿದಿವೆಯೆಂದು ಮತ್ತು ಪೊಲೀಸರನ್ನು ಒಳಗೊಂಡಂತೆ ಸಂಬಂಧಪಟ್ಟ ಪ್ರಾಧಿಕಾರಗಳು, ಅಂಥ ಗಂಭೀರ ಮತ್ತು ಯುಕ್ತ ಕ್ರಮ ಕೈಗೊಳ್ಳಲು ಲೋಪಗಳನ್ನು ಗುರುತಿಸಲು ಸಂಪೂರ್ಣ ತನಿಖೆಯನ್ನು ನಡೆಸಬೇಕಾಗುತ್ತದೆ ಯೆಂಬುದನ್ನು ಪುನರುಚ್ಚರಿಸುವ ಅಗತ್ಯವಿಲ್ಲವೆಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

41. ಮಾನ್ಯ ಅಡಿಷನಲ್ ಸಾಲಿಸಿಟರ್ ಜನರಲ್‌ರವರಾದ ಶ್ರೀ ಕೃಷ್ಣದೀಕ್ಷಿತ್‌ರವರು ಎಫ್‌ಆರ್‌ಆರ್‌ಓ ಶ್ರೀ ಗಣೇಶ್‌ರವರಿಂದ ಸೂಚನೆಗಳನ್ನು ಸ್ವೀಕರಿಸಿದ ನಂತರ, 31.12.2015ರಂದು ಇದ್ದಂತೆ 23,708ರಷ್ಟು ವಿದೇಶೀ ರಾಷ್ಟ್ರೀಯರು ಬೆಂಗಳೂರು ನಗರದಲ್ಲಿ ವಾಸಿಸುತ್ತಿದ್ದಾರೆ ಎಂದು ನಿವೇದಿಸಿದ್ದಾರೆ. ಅಂಥ ಅವಧಿ ಮೀರಿ ವಾಸಿಸುತ್ತಿರುವ ದಾಖಲಿತ ವಿದೇಶೀ ರಾಷ್ಟ್ರೀಯರ ಸಂಬಂಧದಲ್ಲಿ ಯುಕ್ತ ಕ್ರಮ ಕೈಗೊಳ್ಳಲು ಪ್ರತಿತಿಂಗಳು ಪೊಲೀಸು ಇಲಾಖೆಯ ಸಂಬಂಧಪಟ್ಟ ರಾಜ್ಯ ಗುಪ್ತಚರ ವಿಭಾಗದೊಂದಿಗೆ ವಿಷಯ ಹಂಚಿಕೆ ಮಾಡಿಕೊಳ್ಳಲಾಗಿದೆಯೆಂದು ನಿವೇದಿಸಿದ್ದಾರೆ. ವಿಮಾನ ನಿಲ್ದಾಣಗಳು, ಮತ್ತು ಬಂದರುಗಳು ಮತ್ತು ಚೆಕ್ ಪೋಸ್ಟ್‌ಗಳಲ್ಲಿ,

ನಿಯೋಜಿತರಾದ ಅಧಿಕಾರಿಗಳಿಗೆ ಮೇಲಿಂದ ಮೇಲೆ ಸುತ್ತೋಲೆಗಳನ್ನು ಹೊರಡಿಸಲಾಗಿತ್ತೆಂದು ನಿವೇದಿಸಿದ್ದಾರೆ. ಒಮ್ಮೆ ವಿದೇಶೀಯನು ನೆಲೆಗೊಂಡರೆ, ವಿದೇಶೀಯರ ಅಧಿನಿಯಮ, 1946ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಪ್ರಕಾರ ಎಲ್‌ಐಎನ್ ಅನ್ನು ಹೊರಡಿಸಲಾಗುತ್ತದೆ. ಓ.ಎಂ. 25018:718/12 ಎಫ್.ಸಿ.ಸಿ. ದಿನಾಂಕ 12.3.2014ನ್ನು ಹೊಂದಿರುವ ಗೃಹ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ಅಧಿಕೃತ ಜ್ಞಾಪನ ಪ್ರತದ ಪ್ರಕಾರ ದಂಡನೀಯ ಶುಲ್ಕವನ್ನು ವಸೂಲು ಮಾಡಲಾಗಿದೆಯೆಂದು ನಿವೇದಿಸಿದ್ದಾರೆ. ದಂಡನೀಯ ಶುಲ್ಕವನ್ನು ಸಂಗ್ರಹಿಸಿದ ಕೂಡಲೇ ಅವಧಿ ಮೀರಿ ವಾಸಿಸುತ್ತಿರುವ ವಿದೇಶೀಯರನ್ನು ಅವನ/ಅವಳ ದೇಶಕ್ಕೆ ಹಿಂದಕ್ಕೆ ಕಳುಹಿಸಲಾಗುವುದು ಮತ್ತು ಅವಧಿ ಮೀರಿ ವಾಸಿಸುತ್ತಿರುವ ವರ್ಗದ ಪ್ರಕಾರ ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ. ಸುಮಾರು 253ರಷ್ಟು ಸಂಖ್ಯೆಯ ವ್ಯಕ್ತಿಗಳನ್ನು 2013ನೇ ವರ್ಷದಲ್ಲಿ ಗಡೀಪಾರು ಮಾಡಲಾಗಿತ್ತು ಮತ್ತು ಅವಧಿ ಮೀರಿ ವಾಸಿಸುತ್ತಿರುವುದಕ್ಕಾಗಿ ಕಪ್ಪು ಪಟ್ಟಿಗೆ ಸೇರಿಸಲಾಗಿತ್ತು. ಅಪಾರಸಂಖ್ಯೆಯ ಅವಧಿ ಮೀರಿ ವಾಸಿಸುತ್ತಿರುವ ವಿದೇಶೀಯರನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಎಲ್ಲರೂ ಶೀಘ್ರ ಹಾಗೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲೇಬೇಕು.

42. ಮಾನ್ಯ ಅಡಿಷನಲ್ ಅಡ್ವೋಕೇಟ್ ಜನರಲ್‌ರವರಾದ ಶ್ರೀ ಪೊನ್ನಣ್ಣನವರು, ಇಲ್ಲಿ ಅವಧಿ ಮೀರಿ ವಾಸಿಸುತ್ತಿರುವ ವಿದೇಶೀಯರನ್ನು, ಕಪ್ಪುಪಟ್ಟಿಗೆ ಸೇರಿಸುವುದಕ್ಕೆ ಸಂಬಂಧಪಟ್ಟಂತೆ ದಿನಾಂಕ 12.3.2014ರ ಗೃಹ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ಅಧಿಕೃತ ಜ್ಞಾಪನವನ್ನು ಮತ್ತು ಅವರನ್ನು ಗಡೀಪಾರು ಮಾಡುವ ಮೊದಲು ದಂಡವನ್ನು ಸಂಗ್ರಹಿಸಿರುವುದನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. 3ನೇ ಕಂಡಿಕೆಯಲ್ಲಿರುವ ಸದರಿ ಸುತ್ತೋಲೆಯ ಸಂಬಂಧಪಟ್ಟ ಭಾಗವು ಅವರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮಗಳನ್ನು ಕೈಗೊಳ್ಳುವ ಮುನ್ನ ವಿದೇಶೀಯರು ಅವಧಿ ಮೀರಿ ವಾಸಿಸಿದ ದಿನಗಳ ಸಂಖ್ಯೆಗೆ ಸಂಬಂಧಪಟ್ಟಂತೆ ವಿಧಿಸಲಾದ ದಂಡಕ್ಕೆ ಸಂಬಂಧಪಟ್ಟಿರುವುದನ್ನು ವಿವರಿಸುತ್ತದೆ. ಅದನ್ನು ಈ ಕೆಳಗೆ ಉದ್ಧೃತಗೊಳಿಸಲಾಗಿದೆ:

| ಕ್ರಮ ಸಂಖ್ಯೆ | ಅವಧಿ ಮೀರಿ ವಾಸಿಸಿದ ಅವಧಿ | ದಂಡನೀಯ ಶುಲ್ಕ |
|---|---|---|
| 1) | 00 ದಿನಗಳಿಂದ 90 ದಿನಗಳವರೆಗೆ ಅವಧಿ ಮೀರಿ ವಾಸಿಸಿರುವುದಕ್ಕೆ | ಯುಎಸ್$ 30 (ಅಥವಾ ಭಾರತೀಯ ರೂ.ಗಳಲ್ಲಿ ಸಮಾನ ಮೊತ್ತ) |
| 2) | 91 ದಿನಗಳಿಂದ 2 ವರ್ಷಗಳವರೆಗೆ ಅವಧಿ ಮೀರಿ ವಾಸಿಸಿರುವುದಕ್ಕೆ | ಯುಎಸ್$ 130 (ಅಥವಾ ಭಾರತೀಯ ರೂ.ಗಳಲ್ಲಿ ಸಮಾನ ಮೊತ್ತ) |
| 3) | 2 ವರ್ಷಗಳಿಗಿಂತ ಹೆಚ್ಚು ಕಾಲ ಅವಧಿ ಮೀರಿ ವಾಸಿಸಿರುವುದಕ್ಕೆ | ಯುಎಸ್$ 230 (ಅಥವಾ ಭಾರತೀಯ ರೂ.ಗಳಲ್ಲಿ ಸಮಾನ ಮೊತ್ತ) |

ಶ್ರೀ ಪೊನ್ನಣ್ಣನವರು ವಾದಿಸಿರುವುದು ಏನೆಂದರೆ ಈ ಅಧಿಕೃತ ಜ್ಞಾಪನವು ವಿದೇಶೀಯರ ಅಧಿನಿಯಮ, 1946 ಹಾಗೂ ವಿದೇಶೀಯರ ಆದೇಶ 1948ರ ಶಾಸನಬದ್ಧ ಉಪಬಂಧಗಳಿಗೆ ವಿರುದ್ಧವಾಗಿವೆ. ಸ್ವಲ್ಪ ದಂಡವನ್ನು ಸಂಗ್ರಹಿಸುವ ಮೂಲಕ 2 ವರ್ಷಗಳ ಅವಧಿಗೆ ಸಿಂಧುವಾದ ವೀಸಾ ಇಲ್ಲದೆ ಭಾರತದಲ್ಲಿ ವಾಸ ಮಾಡಲು ವ್ಯಕ್ತಿಗೆ ಅವಕಾಶ ನೀಡಿದರೆ, ವಿದೇಶೀಯರ ಅಧಿನಿಯಮ, 1946ರ 14ನೇ ಪ್ರಕರಣದಲ್ಲಿ ಕಂಡು ಬರುವ ದಂಡನೀಯ ಉಪಬಂಧವು ವಾಸ್ತವಿಕವಾಗಿ ನಿರುಪಯುಕ್ತವಾಗುತ್ತವೆ. ಸದರಿ ಸಲ್ಲಿಕೆಗಳಲ್ಲಿ ಅಪಾರವಾದ ಒತ್ತಾಯವಿರುವುದು ಕಂಡು ಬಂದಿದೆ. ಹೆಚ್ಚು ಕಾಲ ಅವಧಿ ಮೀರಿ ವಾಸಿಸಿರುವುದಕ್ಕೆ 14ನೇ ಪ್ರಕರಣವನ್ನು ಉಲ್ಲಂಘಿಸಿರುವಂಥ ವ್ಯಕ್ತಿಗಳ ಆರೋಪ ದಾಖಲಿಸುವ ಬದಲು ಸ್ವಲ್ಪ ದಂಡವನ್ನು ಸಂಗ್ರಹಿಸುವ ಮೂಲಕ ಮಾಫಿ ಮಾಡಲಾಗಿದೆಯೇ ಎಂಬ ಬಗ್ಗೆ ಸಂಬಂಧಪಟ್ಟ ಸಚಿವಾಲಯವು ಮರು ಚಿಂತಿಸುವುದು.

43. ದಿನಾಂಕ 12.03.2014ರ ಜ್ಞಾಪನದಲ್ಲಿ, ಅವಧಿ ಮೀರಿ ವಾಸಿಸಿದ ದಿನಗಳ ಸಂಖ್ಯೆಗೆ ಸಂಬಂಧಿಸಿದಂತೆ ವರ್ಗ ಮತ್ತು ಸ್ಥಾನಬದ್ಧತೆಯ ಅವಧಿಯನ್ನು ಸಹ ಸೂಚಿಸುವುದು. 91 ದಿನಗಳನ್ನು ಮೀರಿ ವ್ಯಕ್ತಿಯು ಅವಧಿ ಮೀರಿ ಆದರೆ

2 ವರ್ಷಗಳಿಗಿಂತ ಕಡಿಮೆಯಾಗಿ ವಾಸಿಸಿದ್ದರೆ ಸ್ಥಾನಬದ್ಧತೆ ಅವಧಿ 2 ವರ್ಷಗಳಾಗುತ್ತವೆ. 2 ವರ್ಷಗಳಿಗಿಂತ ಹೆಚ್ಚು ಕಾಲ ಅವಧಿ ಮೀರಿ ವಾಸಿಸುವುದಕ್ಕೆ ಸಂಬಂಧಪಟ್ಟಂತೆ, ಸ್ಥಾನಬದ್ಧತೆ ಅವಧಿಯು 5 ವರ್ಷಗಳಾಗಿರುತ್ತವೆ. ಅವುಗಳನ್ನು ಅನುಕ್ರಮವಾಗಿ ಪ್ರವರ್ಗ ಸಿ–1, ಸಿ–2, ಸಿ–3 ಕಪ್ಪು ಪಟ್ಟಿ ಪ್ರವರ್ಗವೆಂದು ಪರಿಭಾವಿಸಲಾಗುವುದು.

44. ಎಫ್‌ಆರ್‌ಆರ್‌ಓ ರವರು ಭಾರತದಲ್ಲಿರುವ ವಿದೇಶೀಯರು ಅವಧಿ ಮೀರಿ ವಾಸಿಸಿರುವುದಕ್ಕೆ ಸಂಬಂಧಪಟ್ಟಂತೆ ಸಂಗ್ರಹಿಸಲಾಗುವ ದಂಡನೀಯ ಶುಲ್ಕವನ್ನು ನೋಡಲು ಹೋದರೆ, ವಿದೇಶಿ ರಾಷ್ಟ್ರೀಯನು 2 ವರ್ಷಗಳಿಗಿಂತ ಹೆಚ್ಚಿನ ಕಾಲ ಅವಧಿ ಮಿರಿ ವಾಸಿಸಿದ್ದರೂ ಕೂಡ 230 ಯುಎಸ್‌ಡಿ ಅಥವಾ ಸಮಾನವಾದ ಭಾರತೀಯ ಕರೆನ್ಸಿಯನ್ನು ಸ್ವೀಕರಿಸುವ ಮೂಲಕ ಕಾನೂನು ಬದ್ಧಗೊಳಿಸಬಹುದೆಂಬುದು ಸ್ಪಷ್ಟವಾಗುತ್ತದೆ. ನಂತರ ಅವನನ್ನು ಕಪ್ಪುಪಟ್ಟಿಗೆ ಸೇರಿಸಿ ಅವನ/ಅವಳ ದೇಶಕ್ಕೆ ಹಿಂದಕ್ಕೆ ಕಳುಹಿಸಲಾಗುತ್ತದೆ. ಮಾನ್ಯ ಅಡಿಷನಲ್ ಅಡ್ವೊಕೇಟ್ ಜನರಲ್‌ರವರಾದ ಶ್ರೀ ಪೊನ್ನಣ್ಣನವರು ಸರಿಯಾಗಿ ತೋರಿಸಲಾದಂತೆ, ವಿದೇಶೀಯರ ಅಧಿನಿಯಮ, 1946 ಅಥವಾ ವಿದೇಶೀಯರ ಆದೇಶ 1948ರ ಪ್ರಕಾರ ಕಾನೂನು ಕ್ರಮವನ್ನು ಕೈಗೊಳ್ಳದಿದ್ದರೆ, ಅವಧಿ ಮೀರಿ ವಾಸಿಸುವ ಹೆಚ್ಚಿನ ಪ್ರಕರಣಗಳಾಗುತ್ತವೆ ಮತ್ತು ಅವರು ಎಫ್‌ಆರ್‌ಆರ್‌ಓ ರವರಿಗೆ ಹಣವನ್ನು ಸಂದಾಯ ಮಾಡಿ ಸಂತೋಷವಾಗಿ ಹಿಂದಿರುಗುತ್ತಾರೆ. ಮೇಲಿನ ದಿನಾಂಕ 12.3.2014ರಂದು ಗೃಹ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ಅಧಿಕೃತ ಜ್ಞಾಪನವನ್ನು ಅನುಸರಿಸಿದರೆ, ವಿದೇಶೀಯ ಅಧಿನಿಯಮ, 1946 ಅಥವಾ ವಿದೇಶೀಯರ ಆದೇಶ 1948 ಮತ್ತು ದಂಡನೆಯಿಂದ ವಿನಾಯಿತಿ ನೀಡಿರುವ ಸಂಬಂಧಿತ ಪರಿನಿಯಮಗಳಂಥ ಪ್ರಮುಖ ಕಾನೂನುಗಳನ್ನು ಉಲ್ಲಂಘಿಸಲು ವಿದೇಶೀಯರನ್ನು ಸಮರ್ಥಿಸುವಷ್ಟರಮಟ್ಟಿಗೆ ಉತ್ತಮವಾಗುತ್ತದೆ. ಸದರಿ ನಿವೇದನೆಯಲ್ಲಿ ಹೆಚ್ಚಿನ ಒತ್ತಾಯವಿದೆ ಮತ್ತು ಇದನ್ನು ಮರುಪರಿಗಣಿಸುವುದು ಗೃಹ ವ್ಯವಹಾರಗಳ ಮಂತ್ರಾಲಯಕ್ಕೆ ಸಂಬಂಧಪಟ್ಟಿರುವುದಾಗಿದೆ.

45. ಎಫ್‌ಆರ್‌ಆರ್‌ಓ ಮತ್ತು ಕರ್ನಾಟಕ ಸರ್ಕಾರದ ಪೊಲೀಸು ಇಲಾಖೆಯ ಗುಪ್ತಚರ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೆಲವು ಪೊಲೀಸು

ಅಧಿಕಾರಿಗಳು, ಸಂಬಂಧಪಟ್ಟ ದತ್ತಾಂಶವನ್ನು ಹಂಚಿಕೊಂಡರೂ ಕೂಡ, ಸಂಗ್ರಹಿಸಲಾದ ಮಾಹಿತಿಯನ್ನು ಹಂಚಿಕೊಳ್ಳಲು ಮತ್ತು ಅವಧಿ ಮೀರಿ ವಾಸಿಸುತ್ತಿರುವರೆಂದು ಕಂಡು ಬಂದ ವಿದೇಶೀಯರ ವಿರುದ್ಧ ಯುಕ್ತ ಕ್ರಮ ಕೈಗೊಳ್ಳಲು ಮತ್ತು ಅವರನ್ನು ನಿಯೋಜಿಸಲಾದ ಸ್ಥಳಗಳು, ಅವರು ವಾಸಿಸುತ್ತಿರುವ ಮತ್ತು ಅಧ್ಯಯನ ಮಾಡುತ್ತಿರುವ ಸ್ಥಳಗಳು ಮೊದಲಾದಂಥ ಸಂಬಂಧಪಟ್ಟ ವಿಭಾಗಗಳಿಂದ ಮಾಹಿತಿಯನ್ನು ಪಡೆದುಕೊಳ್ಳಲು ಸಹ ನಿಯತಕಾಲಿಕ ಸಭೆ ನಡೆಸಬೇಕು.

46. ವಿದೇಶೀಯರು ಯಾವ ದೇಶದಿಂದ ಭಾರತಕ್ಕೆ ಬಂದಿರುವರೋ ಆ ದೇಶವು ಪಾಸ್‌ಪೋರ್ಟನ್ನು ನೀಡಿದ್ದರೂ ಸಹ, ನಮ್ಮ ದೇಶವು ವೀಸಾ ಸ್ಟ್ಯಾಂಪಿಂಗ್ ಅನ್ನು ಮಾಡುತ್ತದೆ ಮತ್ತು ನಿರ್ದಿಷ್ಟ ಅವಧಿವರೆಗೆ ಮಾತ್ರ ಭಾರತದಲ್ಲಿ ವಾಸಿಸಲು ವಿದೇಶೀಯರನ್ನು ಅಧಿಕೃತಗೊಳಿಸಿರುವ ವಿದ್ಯುಕ್ತ ದಸ್ತಾವೇಜಾಗಿರುತ್ತದೆ ಮತ್ತು ಯಾವ ಉದ್ದೇಶಕ್ಕೆ ವೀಸಾವನ್ನು ನೀಡಲಾಗಿದೆಯೋ ಆ ಉದ್ದೇಶವನ್ನು ಯಾವುದೇ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳಬಾರದು. ವೀಸಾ ಅವಧಿಯು ಮುಕ್ತಾಯವಾಗುವ ಮೊದಲು ಅವರು ವಾಸಿಸುವುದನ್ನು ವಿಸ್ತರಿಸಲು ಯಾವುದೇ ತಕ್ಷಣದ ಕ್ರಮಗಳನ್ನು ಕೈಗೊಳ್ಳದ ವ್ಯಕ್ತಿಗಳಿಗೆ ವೀಸಾ ಅವಧಿಯನ್ನು ಮೀರಿ ವಾಸಿಸಲು ವಿದೇಶೀಯರಿಗೆ ಅವಕಾಶ ನೀಡಿದರೆ, ಸಂಬಂಧಪಟ್ಟವರ ವಿರುದ್ಧ ಗಟ್ಟಿ ದನಿಯಲ್ಲಿ ಮಾತನಾಡಬೇಕಾಗುತ್ತದೆ.

47. ಭಾರತವು ಈಗಾಗಲೇ ಗಂಭೀರವಾದ ಭಯೋತ್ಪಾದನೆಯ ಬೆದರಿಕೆಗಳನ್ನು ಎದುರಿಸುತ್ತಿದ್ದು, ಭಾರತದ ಭದ್ರತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಮೇಲಿನ ಕಾನೂನುಗಳ ಉಪಬಂಧಗಳ ಕಟ್ಟುನಿಟ್ಟಾದ ಪಾಲನೆಯನ್ನು ಖಚಿತಪಡಿಸುವ ಸಲುವಾಗಿ ಈ ಸಂಗತಿಯನ್ನು ಸಹ ಮನಸ್ಸಿನಲ್ಲಿಟ್ಟುಕೊಳ್ಳಲೇಬೇಕು. ವಿದೇಶೀಯರ ಅಧಿನಿಯಮ ಅಥವಾ ವಿದೇಶೀಯರ ಆದೇಶ, 1948 ಮತ್ತು ಇತರ ಸಂಬಂಧಿತ ಅಧಿನಿಯಮಗಳನ್ನು ಉಲ್ಲಂಘಿಸಿದಾಗಲೆಲ್ಲಾ, ಯಾವುದೇ ನ್ಯಾಯಾಲಯದ ಮುಂದೆ ಸಾಕ್ಷ್ಯವಾಗಿ ಹಾಜರುಪಡಿಸಲು ವೀಸಾವು ಪ್ರಮುಖ ದಸ್ತಾವೇಜಾಗಿರುವುದರಿಂದ ವೀಸಾವನ್ನು ಒಳಗೊಂಡಿರುವ ಪಾಸ್‌ಪೋರ್ಟ್‌ನ್ನು ತನಿಖಾ ಏಜೆನ್ಸಿಯು

ವಶಪಡಿಸಿಕೊಳ್ಳಬೇಕಾಗುತ್ತದೆ. ಅದನ್ನು ಪರಿಣಾಮಕಾರಿಗೊಳಿಸಲು ಸಂಬಂಧಪಟ್ಟ ವಿದೇಶೀಯರಿಗೆ ಒಂದು ಪ್ರಮಾಣಪತ್ರ ನೀಡಬಹುದು. ವೀಸಾ ಸ್ಟ್ಯಾಂಪಿಂಗ್ ಅನ್ನು ಒಳಗೊಂಡಿರುವ ಪಾಸ್‌ಪೋರ್ಟನ್ನು ವಶಪಡಿಸಿಕೊಳ್ಳುವುದನ್ನು ಹೊರತುಪಡಿಸಿ, ಸಾಕ್ಷ್ಯವನ್ನು ಹಾಜರುಪಡಿಸುವ ಯಾವುದೇ ಇತರ ಸಾಕ್ಷ್ಯಗಳಿದ್ದರೆ, ಅದನ್ನು ತನಿಖಾಧಿಕಾರಿ ಕೂಡ ಅಳವಡಿಸಿಕೊಳ್ಳಬೇಕು. ಹಾಗಾಗಿ ಸಂಪೂರ್ಣ ತನಿಖೆಯನ್ನು ಮಾಡಲೇಬೇಕು ಮತ್ತು ಇದನ್ನು ಸಾಧ್ಯವಾದಷ್ಟು ಬೇಗ ಪೂರ್ಣಗೊಳಿಸಬೇಕು ಮತ್ತು ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಅಂತಿಮ ವರದಿಯನ್ನು ಸಲ್ಲಿಸಬೇಕು. ವಿದೇಶೀಯರಿಗೆ ಸಂಬಂಧಪಟ್ಟಂತೆ ಮಾಡಲಾದ ತನಿಖೆಯನ್ನು ಪೊಲೀಸು ಉಪ–ಆಯುಕ್ತರು ಅಥವಾ ಪೊಲೀಸು ಅಧೀಕ್ಷಕರ ದರ್ಜೆಗೆ ಕಡಿಮೆಯಿರದ ಹಿರಿಯ ಪೊಲೀಸು ಅಧಿಕಾರಿಯು ಮೇಲಾಗಿ ಪರೀಕ್ಷಿಸಬೇಕು ನಂತರ ಅಂತಿಮ ವರದಿಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಬೇಕು.

48. ವಿದೇಶೀಯರ ಅಧಿನಿಯಮ, 1946ರ ಸಂಬಂಧಪಟ್ಟ ಉಪಬಂಧಗಳು ಅಥವಾ ಯಾವುದೇ ಇತರ ಅಧಿನಿಯಮ ಅಥವಾ ಸ್ಥಳೀಯ ಕಾನೂನುಗಳ ದಂಡನೀಯ ಉಪಬಂಧಗಳನ್ನು ಉಲ್ಲಂಘಿಸಿರುವುದಕ್ಕೆ ಯಾರೇ ವಿದೇಶೀ ರಾಷ್ಟ್ರೀಯನ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಸಂಬಂಧಪಟ್ಟ ಕ್ರಿಮಿನಲ್ ನ್ಯಾಯಾಲಯವು, ವಿದೇಶೀಯನನ್ನು ಜಾಮೀನಲ್ಲಿ ಇಡಬೇಕೆ ಅಥವಾ ನ್ಯಾಯಿಕ ಅಭಿರಕ್ಷೆಯಲ್ಲಿಡಬೇಕೆ ಎಂಬುದರ ಹೆಚ್ಚಿನ ಆದ್ಯತೆಯ ಮೇಲೆ ಅಂಥ ಪ್ರಕರಣಗಳನ್ನು ಅಧಿವಿಚಾರಣೆಗೆ ಕೈಗೆತ್ತಿಕೊಳ್ಳಬೇಕು. ಅಧಿವಿಚಾರಣೆಯನ್ನು ನಡೆಸುವಲ್ಲಿ ಏನಾದರೂ ವಿಳಂಬವಾದರೆ, ವೀಸಾ ಅವಧಿ ಮುಕ್ತಾಯವಾದ ನಂತರವೂ ಸಹ ಭಾರತದಲ್ಲಿರುವ ಅಂಥ ವಿದೇಶೀ ರಾಷ್ಟ್ರೀಯನಿಗೆ ಅವಕಾಶ ನೀಡುವುದು ಆದಷ್ಟೂ ಉತ್ತಮವಾಗಿರುತ್ತದೆ. ಈ ನ್ಯಾಯಾಲಯದ ರಿಜಿಸ್ಟ್ರಿಯು, ಮಾನ್ಯ ಮುಖ್ಯ ನ್ಯಾಯಮೂರ್ತಿಯವರೊಂದಿಗೆ ಸಮಾಲೋಚಿಸಿ, ಪ್ರಮುಖ ಆದ್ಯತೆಯ ಮೇಲೆ ಯಾವ ಕ್ರಿಮಿನಲ್ ಪ್ರಕರಣಗಳಲ್ಲಿ ವಿದೇಶೀಯರು ತೊಡಗಿರುವರೋ ಅವುಗಳನ್ನು ವಿಲೇವಾರಿ ಮಾಡಲು ರಾಜ್ಯದಲ್ಲಿರುವ ಕ್ರಿಮಿನಲ್ ನ್ಯಾಯಾಲಯಗಳ ಪ್ರಿಸೈಡಿಂಗ್ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಸುತ್ತೋಲೆಯನ್ನು ಹೊರಡಿಸಲು ಸಹ ಆಲೋಚಿಸಬಹುದು.

49. ಸಂಬಂಧಪಟ್ಟ ಅಭಿಯೋಜಕರು, ನ್ಯಾಯಾಲಯದ ಗಮನಕ್ಕೂ ಸಹ ತರಬೇಕು ಮತ್ತು ಆದ್ಯತೆಯ ಮೇಲೆ ಪ್ರಕರಣವನ್ನು ಕೈಗೆತ್ತಿಕೊಳ್ಳಲು ನ್ಯಾಯಾಲಯವನ್ನು ಕೋರಬೇಕು ಮತ್ತು ಅನುಚಿತ ವಿಳಂಬ ಮಾಡದೆ ಸಂಬಂಧಪಟ್ಟ ಎಲ್ಲಾ ಸಾಕ್ಷಿದಾರರನ್ನು ಪರೀಕ್ಷಿಸಬೇಕು ಮತ್ತು ಆ ಮೂಲಕ ಆದಷ್ಟು ಬೇಗನೆ ತನ್ನ ನಿರ್ಣಯವನ್ನು ತಿಳಿಸಲು ನ್ಯಾಯಾಲಯಕ್ಕೆ ಸಾಧ್ಯವಾಗುವಂತೆ ಮಾಡಬೇಕು. ಒಬ್ಬ ವಿದೇಶೀಯನು ಒಮ್ಮೆ ಅಪರಾಧಿಯೆಂದು ನಿರ್ಣೀತನಾದರೆ ಅದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ ಮತ್ತು ಅವನು ಕಾರಾವಾಸ ಶಿಕ್ಷೆಗೆ ಗುರಿಪಡಿಸಿ ಸಂಬಂಧಪಟ್ಟವರು ಅವನನ್ನು ಗಡೀಪಾರು ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

50. ವಿದೇಶೀಯರು ಯಾವ ಪ್ರಕರಣಗಳ ಅಧಿವಿಚಾರಣೆಯಲ್ಲಿ ಭಾಗಿಯಾಗಿರುವರೋ ಆ ಪ್ರಕರಣಗಳನ್ನು ಕ್ರಿಮಿನಲ್ ನ್ಯಾಯಾಲಯಗಳು ಆದ್ಯತೆಯ ಮೇಲೆ ಅಂಥ ವಿಷಯಗಳನ್ನು ಕೈಗೆತ್ತಿಕೊಳ್ಳಬೇಕು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಆಜ್ಞಾಪನೆ ಪ್ರಕಾರ ಯಾವುದೇ ಅನುಚಿತ ವಿಳಂಬ ಮಾಡದೆ ಅದನ್ನು ವಿಲೇ ಮಾಡಬೇಕು ಎಂಬುದನ್ನು ಪುನರುಚ್ಛರಿಸುವ ಅಗತ್ಯವಿರುವುದಿಲ್ಲ. ಇದಲ್ಲದೆ, ವಿದೇಶೀಯನು ತಪ್ಪಿತಸ್ಥನೆಂದು ಒಪ್ಪಿಕೊಳ್ಳುವುದರ ಆಧಾರದ ಮೇಲಾಗಲಿ ಅಥವಾ ಪ್ರತಿವಾದದ ನಂತರ ಅವನನ್ನು ನ್ಯಾಯಾಲಯವು ತಪ್ಪಿತಸ್ಥನೆಂದು ನಿರ್ಣಯಿಸುವ ಆಧಾರದ ಮೇಲಾಗಲಿ ವಿದೇಶೀಯನ ಅಪರಾಧವನ್ನು ನಿರ್ಣಯಿಸುತ್ತಿರುವಾಗ, ನ್ಯಾಯಾಲಯವು, ಸೌಮ್ಯಕಾರಕ ಮತ್ತು ತೀವ್ರತರ ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ವಿದೇಶೀಯರೊಂದಿಗೆ ವ್ಯವಹರಿಸುವ ಕ್ರಿಮಿನಲ್ ನ್ಯಾಯಾಲಯಗಳ ನ್ಯಾಯಾಧೀಶರು ಇಂಗ್ಲೀಷಿನಲ್ಲಿ ತೀರ್ಪುಗಳನ್ನು ಬರೆಯುವ ಮೂಲಕ ಮತ್ತು ಇಂಗ್ಲೀಷ್‌ನಲ್ಲಿ ಸಾಕ್ಷ್ಯವನ್ನು ದಾಖಲಿಸುವ ಮೂಲಕ ಸಕಾರಾತ್ಮಕ ಪ್ರಯತ್ನ ಮಾಡಲೇಬೇಕು. ಈ ನ್ಯಾಯಾಲಯವು, ಯಾವುದೇ ಅಲ್ಪಶಿಕ್ಷೆಯಾಗಿರುವುದಿಲ್ಲವೆಂದು ಮತ್ತು ವಿಶೇಷ ಸಂದರ್ಭಗಳಲ್ಲಿ ಕಡಿಮೆ ದಂಡನೆ ವಿಧಿಸಲು ವಿವೇಚನೆಯನ್ನು ಬಳಸಿಕೊಳ್ಳಬಹುದೆಂದು ಮತ್ತು ಅಂಥ ಕ್ರಮವನ್ನು ಅಳವಡಿಸಿಕೊಳ್ಳಲು ವಿಶೇಷ ಆಧಾರಗಳಿರಲೇಬೇಕೆಂದು ಅಪೇಕ್ಷಿಸುತ್ತದೆ.

51. ತನಿಖಾ ಏಜೆನ್ಸಿಯು ಪಾಸ್‌ಪೋರ್ಟ್‌ಗಳನ್ನು ವಶಪಡಿಸಿಕೊಂಡಾಗ ಮತ್ತು ನ್ಯಾಯಾಲಯದ ಮುಂದೆ ಹಾಜರುಪಡಿಸುವಾಗಲೆಲ್ಲ ಅಥವಾ ಯಾವುದೇ ಕ್ರಿಮಿನಲ್ ನ್ಯಾಯಾಲಯದ ಮುಂದೆ ಪಾಸ್‌ಪೋರ್ಟ್‌ಗಳನ್ನು ಹಾಜರುಪಡಿಸಲು ಆದೇಶಿಸಿದಾಗ, ಜಾಮೀನು ಪತ್ರಗಳನ್ನು ನಿರ್ವಹಿಸುತ್ತಿರುವಾಗ, ಪ್ರಕರಣದ ದಾಖಲೆಗಳೊಂದಿಗೆ ಯಾವುದೇ ರೀತಿಯಲ್ಲಿ ಅವುಗಳನ್ನು ಸೇರಿಸಬಾರದು, ಆದರೆ, ಸುರಕ್ಷಿತ ಅಭಿರಕ್ಷೆಯಲ್ಲಿಡಬೇಕು ಮತ್ತು ಸಾಧ್ಯವಾದರೆ, ಆರೋಪ ಪಟ್ಟಿಯೊಂದಿಗೆ ತನಿಖಾಧಿಕಾರಿ ಮುಂದೆ ಅಂಥ ಪಾಸ್‌ಪೋರ್ಟನ್ನು ಹಾಜರುಪಡಿಸಿರುವ ಅಥವಾ ಜಾಮೀನು ಷರತ್ತುಗಳಿಗೆ ಅನುಸಾರವಾಗಿ ಅದನ್ನು ಹಾಜರುಪಡಿಸಿರುವ ಪಾಸ್‌ಪೋರ್ಟ್ ಧಾರಕನಿಗೆ ಪ್ರಮಾಣಪತ್ರವನ್ನು ನೀಡತಕ್ಕದ್ದು. ವೀಸಾ ವರದಿಗಳನ್ನು ಒಳಗೊಂಡಿರುವ ಮೂಲ ಪಾಸ್‌ಪೋರ್ಟನ್ನು ಅವನು ಯಾಕೆ ಹೊಂದಿರಲಿಲ್ಲವೆಂಬ ಬಗ್ಗೆ ಯಾರೇ ವ್ಯಕ್ತಿಗೆ ತೋರಿಸಲು ವಿದೇಶೀಯನನ್ನು ಇದು ಶಕ್ತಗೊಳಿಸುತ್ತದೆ.

52. ಪ್ರಕರಣವನ್ನು ಆದಷ್ಟು ಬೇಗನೆ ವಿಲೇವಾರಿ ಮಾಡುವಲ್ಲಿ ನ್ಯಾಯಾಲಯಕ್ಕೆ ಸಹಾಯ ಮಾಡುವುದು ಸಹ ಸಂಬಂಧಪಟ್ಟ ಅಭಿಯೋಜಕರ ಬದ್ಧ ಕರ್ತವ್ಯವಾಗಿರುತ್ತದೆ. ಪೊಲೀಸು ಇಲಾಖೆಯು ನೈಜ ಕುಂದುಕೊರತೆಯನ್ನು ಆಲಿಸಲು ಪೊಲೀಸು ಉಪ ಆಯುಕ್ತ ಅಥವಾ ಪೊಲೀಸು ಅಧೀಕ್ಷಕರ ದರ್ಜೆಗೆ ಕಡಿಮೆಯಿರದ ಪೊಲೀಸು ಅಧಿಕಾರಿಯು ಮುಖ್ಯಸ್ಥರಾದ ವಿಭಾಗವನ್ನು ಸ್ಥಾಪಿಸಲು ಮತ್ತು ವಿದೇಶೀ ರಾಷ್ಟ್ರೀಯರ ಮತ್ತು ಅವರಲ್ಲಿರುವ ನೈಜ ಕುಂದು ಕೊರತೆಗಳನ್ನು ಪರಿಗಣಿಸಲು ಮತ್ತು ತನಿಖೆಯನ್ನು ಪೂರ್ಣಗೊಳಿಸಿದ ನಂತರ ತನಿಖಾಧಿಕಾರಿಯು ಸಲ್ಲಿಸಬಹುದಾದ ಅಂತಿಮ ವರದಿಯನ್ನು ಪರೀಕ್ಷಿಸಲು ಪೊಲೀಸು ಇಲಾಖೆ ಆಲೋಚಿಸಬಹುದೆಂಬುದನ್ನು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ. ತನಿಖೆಯು ಆಮೂಲಾಗ್ರವಾಗಿ ಮತ್ತು ಪರಿಣಾಮಕಾರಿಯಾಗಿರಬೇಕೆಂಬುದನ್ನು ಸಹಾ ಪುನರುಚ್ಚರಿಸಬೇಕಾಗಿರುವುದಿಲ್ಲ.

52. ಇದರ ಫಲಿತಾಂಶವಾಗಿ ಈ ಮುಂದಿನ ಆದೇಶವನ್ನು ಹೊರಡಿಸಲಾಗಿದೆ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ 439ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಲಾಗಿದೆ.

ದೋಷಾರೋಪಪಟ್ಟಿಯನ್ನು ಯಾವ ಕ್ರಿಮಿನಲ್ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದೆಯೋ ಆ ಸಂಬಂಧಪಟ್ಟ ನ್ಯಾಯಾಲಯವು, ಅನುಚಿತ ವಿಳಂಬವಿಲ್ಲದೆ ಸೆಷನ್ಸ್ ನ್ಯಾಯಾಲಯಕ್ಕೆ ಪ್ರಕರಣವನ್ನು ಒಪ್ಪಿಸತಕ್ಕದ್ದು, ಇದಾದ ನಂತರ ಸಂಬಂಧಪಟ್ಟ ಸೆಷನ್ಸ್ ನ್ಯಾಯಾಲಯವು ಯುಕ್ತ ಆರೋಪಗಳನ್ನು ರೂಪಿಸುವ ಮೂಲಕ ಅಧಿವಿಚಾರಣೆಗಾಗಿ ಪ್ರಕರಣವನ್ನು ಕೈಗೆತ್ತಿಕೊಳ್ಳುವುದು. ಪ್ರಾಸಿಕ್ಯೂಷನ್ನು ಯಾವ ಸಾಕ್ಷಿದಾರರನ್ನು ಪರಿಶೀಲಿಸಲು ಉದ್ದೇಶಿಸಿದೆಯೋ ಅವರನ್ನು ಆದಷ್ಟು ಬೇಗನೆ ಪರೀಕ್ಷಿಸುವುದು. ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮತ್ತು ಮಾನ್ಯ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ದಂಡ ಪ್ರಕ್ರಿಯಾ ಸಂಹಿತೆಯ 309ನೇ ಪ್ರಕರಣದ ಆಜ್ಞಾಪನೆಯನ್ನು ಮತ್ತು ವಿವಾದಾಂಶ ಸಂ.2ರ ಪ್ರಕಾರ ಈ ಆದೇಶದಲ್ಲಿ ಮಾಡಲಾದ ಇತರ ಅಭಿಪ್ರಾಯೋಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅನುಚಿತ ವಿಳಂಬ ಮಾಡದೆ ವಿಷಯುವನ್ನು ವಿಲೇವಾರಿ ಮಾಡುವಲ್ಲಿ ನ್ಯಾಯಾಧೀಶರೊಂದಿಗೆ ಸಹಕರಿಸುವುದು.